ಸುದ್ದಿ ಹಾಗೂ ಜಾಹೀರಾತಿಗೆ ಸಂಪರ್ಕಿಸಿ
9980498553
9606979449

RNI: KNKAN/ 25/A2724

# ಉತ್ತರ ಕರ್ನಾಟಕ ಸುದ್ದಿಗಳು

UTTARA KARNATAKA SUDDIGALU
Kannada Daily Morning

ಕನ್ನಡ ದಿನಪತ್ರಿಕೆ

Email
uttarkarnatkasuddigalu@gmail.com

ಸಂಪಾದಕರು: ಅವಿನಾಶ ಎಸ್. ಸಾಲಿಮನಿ




ಅನಧಿಕೃತ ಮದ್ಯ ಮಾರಾಟಕ್ಕೆ ಕಡಿವಾಣ ಹಾಕಲು ಮುಖಂಡರ ಆಗ್ರಹ »2

ಯಾವ ಮೋಹನ ಮುರಳಿ ಕಳಿಸಿತು ನನ್ನ ಬಳಿ ನಿಮ್ಮನು... »2

ಚುನಾವಣಾ ಆಯೋಗದ ನಿಯಮಾವಳಿ ಕಟ್ಟುನಿಟ್ಟಾಗಿ ಪಾಲಿಸಿ: ಡಿಸಿ »3

ಸಂಪುಟ(Volume): 1 ಸಂಚಿಕೆ (Issue): 298 ● ಪುಟ (Page): 4 ● ದರ: Rs. 4 ಮಂಗಳವಾರ 13 ಅಕ್ಟೋಬರ್ 2026 ● 13 OCTOBER 2026 ● ಧಾರವಾಡ ● ಹಾವೇರಿ ● ಗದಗ ● ಕೊಪ್ಪಳ ● ವಿಜಯನಗರ ● ರಾಯಚೂರು ● ವಿಜಯಪುರ ● ಬಾಗಲಕೋಟೆ ● ಬೆಳಗಾವಿ ಉತ್ತರ ಕನ್ನಡ

## ಸಾಲಬಾಧೆ ತಾಳಲಾರದೆ ಲಕ್ಕಲಕಟ್ಟಿಯ ರೈತ ಸಾವು

**ಗಜೇಂದ್ರಗಡ:** ತಾಲ್ಲೂಕಿನ ಸಮೀಪದ ಲಕ್ಕಲಕಟ್ಟಿ ಗ್ರಾಮದ 53 ವರ್ಷದ ರೈತ ಸಂಗಯ್ಯ ಕಳಕಯ್ಯ ಹಿರೇಮಠ ಅವರು ಸಾಲದ ಬಾಧೆಯಿಂದ ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ.



***ಬರಗಾಲದಿಂದ ಬೆಳೆ ನಷ್ಟ; 15 ರಿಂದ 20 ಲಕ್ಷಕ್ಕೂ ಅಧಿಕ ಸಾಲದ ಹೊರೆ**
***ಕುಟುಂಬ ನಿರ್ವಹಣೆಯ ಸಂಕಷ್ಟ**

ಕಳೆದ ಎರಡು ವರ್ಷಗಳಿಂದ ಮಳೆ ಕೊರತೆಯಿಂದಾಗಿ ಬೆಳೆ ನಷ್ಟ ಅನುಭವಿಸಿದ್ದ ರೈತ ಸಂಗಯ್ಯ ಅವರು ಕುಟುಂಬ ನಿರ್ವಹಣೆಗಾಗಿ ವಿವಿಧ ಖಾಸಗಿ ಬ್ಯಾಂಕ್‌ಗಳು ಹಾಗೂ ಸೊಸೈಟಿಗಳಿಂದ ಸಾಲ ಪಡೆದಿದ್ದರು. ಸುಮಾರು 15 ರಿಂದ 20 ಲಕ್ಷಕ್ಕೂ ಅಧಿಕ ಸಾಲವಾಗಿದ್ದು, ಅದನ್ನು ಮರುಪಾವತಿಸಲು ಸಾಧ್ಯವಾಗದೆ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದರು ಎನ್ನಲಾಗಿದೆ.

ಪ್ರಗತಿಪರ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದ ಅವರು, ಬರಗಾಲದ ಹಿನ್ನೆಲೆಯಲ್ಲಿ ಕೃಷಿಯಿಂದ ನಿರೀಕ್ಷಿತ ಆದಾಯ ದೊರೆಯದ ಕಾರಣ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ (ನರೇಗಾ) ಕೂಲಿ ಕೆಲಸವನ್ನೂ ಮಾಡುತ್ತಿದ್ದರು. ಆದರೆ, ಕೂಲಿ ಕೆಲಸದಿಂದ ದೊರೆಯುತ್ತಿದ್ದ ಆದಾಯ ಕುಟುಂಬದ ಅಗತ್ಯಗಳನ್ನು ಪೂರೈಸಲು ಸಾಕಾಗುತ್ತಿರಲಿಲ್ಲ ಎನ್ನಲಾಗಿದೆ.

ಐವರು ಮಕ್ಕಳಾದ ನಾಲ್ವರು ಹೆಣ್ಣುಮಕ್ಕಳು ಹಾಗೂ ಒಬ್ಬ ಗಂಡು ಮಗನ ಕುಟುಂಬದ ಜವಾಬ್ದಾರಿ ಅವರ ಮೇಲಿತ್ತು. ಮಕ್ಕಳ ಭವಿಷ್ಯ ಹಾಗೂ ಕುಟುಂಬ ನಿರ್ವಹಣೆಯ ಚಿಂತೆ, ಮತ್ತೊಂದೆಡೆ ಹೆಚ್ಚುತ್ತಿರುವ ಸಾಲದ ಹೊರೆ ಅವರ ಕುಟುಂಬವನ್ನು ಸಂಕಷ್ಟಕ್ಕೆ ದೂಡಿತ್ತು ಎಂದು ತಿಳಿದುಬಂದಿದೆ. ಈ ಹಿನ್ನೆಲೆಯಲ್ಲಿ ಸಂಗಯ್ಯ ಅವರು ವಿಷ ಸೇವಿಸಿದ್ದು, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ. ಘಟನೆಯಿಂದ ಲಕ್ಕಲಕಟ್ಟಿ ಗ್ರಾಮದಲ್ಲಿ ದುಃಖದ ವಾತಾವರಣ ನಿರ್ಮಾಣವಾಗಿದೆ.

ಬರಗಾಲ, ಬೆಳೆ ನಷ್ಟ ಮತ್ತು ಸಾಲದ ಹೊರೆ ರೈತ ಕುಟುಂಬಗಳ ಬದುಕನ್ನು ಸಂಕಷ್ಟಕ್ಕೆ ತಳ್ಳುತ್ತಿರುವ ಹಿನ್ನೆಲೆಯಲ್ಲಿ, ಸಂಕಷ್ಟದಲ್ಲಿರುವ ರೈತರಿಗೆ ಸೂಕ್ತ ನೆರವು ಹಾಗೂ ಪರಿಹಾರ ಒದಗಿಸುವಂತೆ ಗ್ರಾಮಸ್ಥರು ಮತ್ತು ರೈತರು ಆಗ್ರಹಿಸಿದ್ದಾರೆ.

# ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಳ ಆದೇಶ ರದ್ದು ಮಾಡಿದ ಹೈಕೋರ್ಟ್

### ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಿ | ಸಂಸದ ಬೊಮ್ಮಾಯಿ ಒತ್ತಾಯ

**ಬೆಂಗಳೂರು:** ರಾಜ್ಯದ ಎಸ್‌ಸಿ ಎಸ್‌ಟಿ ಮೀಸಲಾತಿ ಹೆಚ್ಚಳ ಮಾಡಿದ್ದ ಹಿಂದಿನ ಬಿಜೆಪಿ ಸರ್ಕಾರದ ಆದೇಶವನ್ನು ಸೋಮವಾರ ಕರ್ನಾಟಕ ಹೈಕೋರ್ಟ್ ರದ್ದು ಮಾಡಿದೆ. ಈ ಬೆನ್ನಲ್ಲೆ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಪ್ರತಿಕ್ರಿಯೆ ನೀಡಿದ್ದು, ಈಗಿನ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಬೇಕು ಎಂದು ಒತ್ತಾಯಿಸಿದ್ದಾರೆ. ಇಲ್ಲ ನಾವೇ ಹೋಗುತ್ತೇವೆ ಎಂದು ಬೊಮ್ಮಾಯಿ ಹೇಳಿದ್ದಾರೆ.



ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ನಮ್ಮ ಸರ್ಕಾರ ಮೀಸಲಾತಿಯನ್ನು ಹೆಚ್ಚು ಮಾಡುವಂತಹ ಸಂದರ್ಭದಲ್ಲಿ ಜಸ್ಟೀಸ್ ನಾಗಮೋಹನ್ ದಾಸ್ ಅವರ ವರದಿ ಆಧಾರದ ಮೇಲೆ, ಅದಕ್ಕೆ ವಿಧಾನ ಮಂಡಲದ ಎರಡೂ ಸದನದಲ್ಲಿ ಕಾನೂನನ್ನು ಪಾಸ್ ಮಾಡಿ ಮಾಡಿರುವಂತದ್ದು. ಅದರ ಹಿಂದೆ ಸಂವಿಧಾನ ಎಸ್.ಸಿ, ಎಸ್.ಟಿ ಜನಾಂಗಕ್ಕೆ ಜನಸಂಖ್ಯೆ ಆಧಾರದ ಮೇಲೆ ಮೀಸಲಾತಿಯನ್ನು ಕೊಡುವಂತಹ ಅವಕಾಶ ಇದೆ ಅನ್ನುವುದು ಸಂವಿಧಾನದಲ್ಲಿ ಇರುವ ಕಾರಣ ಮತ್ತು ನಾಗಮೋಹನ್ ದಾಸ್ ವರದಿ ಶಿಫಾರಸಿನ ಕಾರಣ ಇದು ಕಾನೂನನ್ನು ಮಾಡಿದೆ ಹೊರತಾಗಿ, ಇದು ಆದೇಶ ಅಲ್ಲ ಎಂದು ತಿಳಿಸಿದ್ದಾರೆ.

### ರಿಟ್ ಪಿಟಿಷನ್ ಹಾಕಬೇಕು

**ಹಾಗೆ ಯಾರು ಪಿ.ಐ.ಎಲ್ ಹೋಗಿದ್ದಾರೆ ಅವರು ಎಸ್.ಸಿ, ಎಸ್.ಟಿ ಜನಾಂಗದ ಅಭಿವೃದ್ಧಿಯ ವಿರೋಧಿಗಳಾಗಿ ಪಿ.ಐ.ಎಲ್ ಹಾಕಿದ್ದರು. ರಾಜ್ಯ ಸರ್ಕಾರ ಇದನ್ನು ಖಂಡಿತವಾಗಿಯೂ ಸುಪ್ರೀಂ ಕೋರ್ಟ್ ಗೆ ತೆಗೆದುಕೊಂಡು ಹೋಗಬೇಕು. ಮತ್ತು ಬೇರೆ ಬೇರೆ ರಾಜ್ಯಗಳಲ್ಲಿ ಶೇಕಡಾ 50 ಕ್ಕಿಂತ ಹೆಚ್ಚು ರಿಸರ್ವೇಷನ್ ಆಗಿದೆ. ತಮಿಳುನಾಡು, ಛತ್ತೀಸಗಢ ಸೇರಿದಂತೆ ಅನೇಕ ರಾಜ್ಯಗಳಲ್ಲಿ ಆಗಿದೆ, ಆ ಉದಾಹರಣೆ ಸಮೇತವಾಗಿ ಸುಪ್ರೀಂಕೋರ್ಟ್ ನಲ್ಲಿ ರಿಟ್ ಪಿಟಿಷನ್ ಹಾಕಬೇಕು. ರಾಜ್ಯ ಸರ್ಕಾರ ಹಾಕದಿದ್ದರೆ ನಾವು ಸುಪ್ರೀಂ ಕೋರ್ಟ್ ಗೆ ತೆಗೆದು-ಕೊಂಡು ಹೋಗುತ್ತೇವೆ ಎಂದು ತಿಳಿಸಿದ್ದಾರೆ.**

## ಎಸ್‌ಐಆರ್ ಅಕ್ರಮಗಳ ಬಗ್ಗೆ ಸುಪ್ರೀಂ ಕದ ತಟ್ಟಿದ ರಾಹುಲ್ ಗಾಂಧಿ

**ನವದೆಹಲಿ:** ವಿರೋಧ ಪಕ್ಷದ ನಾಯಕ (LOP) ಮತ್ತು ಹಿರಿಯ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸುಪ್ರೀಂ ಕೋರ್ಟ್‌ನಲ್ಲಿ ರಿಟ್ ಅರ್ಜಿಯೊಂದನ್ನು ಸಲ್ಲಿಸಿದ್ದಾರೆ. ಮತದಾರರ ಪಟ್ಟಿಯಿಂದ ದೊಡ್ಡ ಪ್ರಮಾಣದಲ್ಲಿ ಹೆಸರುಗಳನ್ನು ಕೈಬಿಟ್ಟಿರುವುದು ಮತ್ತು ಪ್ರಸ್ತುತ ನಡೆಯುತ್ತಿರುವ ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರಣೆ' (SIR) ಪ್ರಕ್ರಿಯೆಯಲ್ಲಿನ ಅಕ್ರಮಗಳ ಆರೋಪಗಳನ್ನು ಈ ಅರ್ಜಿಯಲ್ಲಿ ಪ್ರಶ್ನಿಸಲಾಗಿದೆ.



ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ತೃಣಮೂಲ ಕಾಂಗ್ರೆಸ್ (TMC) ಸಂಸದ ಸೌಗತ ರಾಯ್, ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್, ರಾಷ್ಟ್ರೀಯ ಜನತಾ ದಳ (RJD) ನಾಯಕ ತೇಜಸ್ವಿ ಪ್ರಸಾದ್ ಯಾದವ್, ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷದ (NCP-SCP) ನಾಯಕಿ ಸುಪ್ರಿಯಾ ಸುಳೆ, ಶಿವಸೇನೆ-ಯುಬಿಟಿ (Shiv Sena-UBT) ನಾಯಕ ಸಂಜಯ್ ರಾವತ್, ಸಿಪಿಐ (ಅಕಖ) ನಾಯಕ ಡಿ. ರಾಜಾ, ಜಾರ್ಖಂಡ್ ಮುಕ್ತಿ ಮೋರ್ಚಾ (JMM) ಸಂಸದೆ ಮಹುವಾ ಮಾಜಿ, ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಎಂ.ಎ. ಬೇಬಿ ಮತ್ತು ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ (ಋಗಿಒಐ) ನಾಯಕ ಇ.ಟಿ. ಮೊಹಮ್ಮದ್ ಬಶೀರ್ ಕೂಡ ಇದೇ ರೀತಿಯ ಅರ್ಜಿಯನ್ನು ಸಲ್ಲಿಸಿದ್ದಾರೆ.

## ಸಮರ್ಥರಲ್ಲದಿದ್ದರೆ ಮೊದಲು ನೀವು ರಾಜೀನಾಮೆ ನೀಡಿ, ಸಿಜೆಐಗೆ ಕಾಂಗ್ರೆಸ್ ಒತ್ತಾಯ

**ನವದೆಹಲಿ:** ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ರಾಜೀನಾಮೆಗೆ ಕೇರಳಂ ಕಾಂಗ್ರೆಸ್ ಒತ್ತಾಯಿಸಿದೆ. ಸಿಜೆಐ ರಾಜೀನಾಮೆಗೆ ಒತ್ತಾಯಿಸುವ ಕಾಂಗ್ರೆಸ್ ಹೇಳಿಕೆಯನ್ನು ಸುಪ್ರೀಂ ಕೋರ್ಟ್ ಬಾರ್ ಅಸೋಸಿಯೇಷನ್ ತೀವ್ರವಾಗಿ ಖಂಡಿಸಿದೆ. ಪ್ರತಿಯೊಬ್ಬ ವ್ಯಕ್ತಿಗೂ ಕೋರ್ಟ್ ನ ಸಂಪರ್ಕಿಸಲು ಮತ್ತು ಕಾನೂನು ಪರಿಹಾರ ಪಡೆಯಲು ಹಕ್ಕಿದೆ ಎಂದು ಎಸ್‌ಸಿಬಿಎ ಹೇಳಿದೆ. ಇಂತಹ ಹೇಳಿಕೆಗಳು ನ್ಯಾಯಾಂಗದ ಸಂಸ್ಥೆಯನ್ನು ಅವಮಾನಿಸುತ್ತವೆ ಮತ್ತು ನ್ಯಾಯಾಂಗ ಪ್ರಕ್ರಿಯೆಯಲ್ಲಿ ಹಸ್ತಕ್ಷೇಪ ಮಾಡುವ ಪ್ರಯತ್ನಕ್ಕೆ ಸಮ. ಭಾರತದ ಸುಪ್ರೀಂ ಕೋರ್ಟ್‌ನ ಘನತೆ ಮತ್ತು ಘನತೆಯನ್ನು ಕಾಪಾಡಿಕೊಳ್ಳಲು ಎಸ್‌ಸಿಬಿಎ ತನ್ನ ಸದಸ್ಯರು ಮತ್ತು ಇತರರಿಗೆ ಮನವಿ ಮಾಡುತ್ತದೆ.



ಕೇರಳ ಕಾಂಗ್ರೆಸ್ ಟ್ವಿಟರ್‌ನಲ್ಲಿ ಸಿಜೆಐ ರಾಜೀನಾಮೆಗೆ ಒತ್ತಾಯಿಸಿ ಪೋಸ್ಟ್ ಮಾಡಿತ್ತು. ಇದನ್ನು ಬಿಜೆಪಿ ವಿರೋಧಿಸಿತು. ಸಮಸ್ಯೆ ಉಲ್ಬಣಗೊಂಡ ನಂತರ, ಕಾಂಗ್ರೆಸ್ ಪೋಸ್ಟ್ ಅನ್ನು ಅಳಿಸಿದೆ. ಕೇರಳ ಕಾಂಗ್ರೆಸ್ ಪೋಸ್ಟ್‌ನಲ್ಲಿ ಡಿಯರ್ ಸೂರ್ಯಕಾಂತ್, ನೀವು ಕಾನೂನು ಮತ್ತು ಸುವ್ಯವಸ್ಥೆಯನ್ನು ನಿರ್ವಹಿಸಲು ಸಮರ್ಥರಲ್ಲದಿದ್ದರೆ, ಈಗಲೇ ರಾಜೀನಾಮೆ ನೀಡಿ, ಇದನ್ನು ನಿಭಾಯಿಸಬಲ್ಲ ವ್ಯಕ್ತಿಯನ್ನು ನಾವು ನಿಮ್ಮ ಸ್ಥಾನದಲ್ಲಿ ಇಡುತ್ತೇವೆ ಎಂದು ಪೋಸ್ಟ್ ನಲ್ಲಿ ಬರೆದಿತ್ತು.

ಇನ್ನು ಈ ಪೋಸ್ಟ್ ಗೆ ತೀವ್ರ ವಿರೋಧ ವ್ಯಕ್ತವಾಗುತ್ತಿದ್ದಂತೆ ಕೇರಳಂ ಕಾಂಗ್ರೆಸ್ ಸಿಜೆಐ ಬಗ್ಗೆ ಪೋಸ್ಟ್ ಅಳಿಸಿ ಹಾಕಿದೆ. ಈ ಬಗ್ಗೆ ಪ್ರತಿಕ್ರಿಯಿಸಿದ ಪಕ್ಷದ ರಾಜ್ಯಸಭಾ ಸಂಸದ ಪವನ್ ಖೇರಾ, ಯಾರೇ ಮಾಡಿದರೂ ನಾವು ಇದನ್ನು ಸಂಪೂರ್ಣವಾಗಿ ಒಪ್ಪುವುದಿಲ್ಲ. ಇದು ಸಂಪೂರ್ಣವಾಗಿ ತಪ್ಪು. ಈ ದೇಶದ ನ್ಯಾಯಾಂಗದ ಮೇಲೆ ನಮಗೆ ಸಂಪೂರ್ಣ ನಂಬಿಕೆ ಇದೆ. ನಾವು ಅತ್ಯುನ್ನತ ನ್ಯಾಯಾಲಯವನ್ನು ಗೌರವಿಸುತ್ತೇವೆ. ಅದಕ್ಕಾಗಿಯೇ ನಾವು ಅತ್ಯುನ್ನತ ನ್ಯಾಯಾಲಯವನ್ನು ಸಂಪರ್ಕಿಸಿದ್ದೇವೆ. ನ್ಯಾಯಾಂಗದ ಮೇಲೆ ನಂಬಿಕೆ ಇರುವುದರಿಂದ ಅದರ ಬಾಗಿಲು ತಟ್ಟಿದ್ದೇವೆ ಎಂದು ಹೇಳಿದರು. ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಕುರಿತು ಚುನಾವಣಾ ಆಯೋಗದ ನಿರ್ಧಾರವನ್ನು ಪ್ರಶ್ನಿಸಿ ರಾಹುಲ್ ಗಾಂಧಿ ಮತ್ತು ಇತರ 10 ವಿರೋಧ ಪಕ್ಷದ ನಾಯಕರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ ನಂತರ ಈ ಇಡೀ ವಿಷಯವು ವೇಗವನ್ನು ಪಡೆದು-ಕೊಂಡಿದೆ. ವಿವಾದಾತ್ಮಕ ನಿರ್ಧಾರಗಳಿಗೆ ಸಂಬಂಧಿಸಿದ ಇಅ ಯ ಸಂಪೂರ್ಣ ಫೈಲ್‌ಗಳು, ಕಾರ್ಯಸೂಚಿ, ಸಭೆಯ ನಿಮಿಷಗಳು, ಟಿಪ್ಪಣಿಗಳು ಮತ್ತು ಆಕ್ಷೇಪಣೆಗಳನ್ನು ಬಹಿರಂಗಪಡಿಸಬೇಕೆಂದು ಅವರು ಒತ್ತಾಯಿಸಿದ್ದಾರೆ. ಇವುಗಳಲ್ಲಿ ಜೂನ್ 24, 2025 ರಂದು ಖಋಖ ಅನ್ನು ಪ್ರಾರಂಭಿಸುವ ನಿರ್ಧಾರ ಮತ್ತು ECINET ಮತ್ತು ERONET ನ ಪ್ರವೇಶ ದಾಖಲೆಗಳು ಸೇರಿವೆ.

## ಅತ್ಯಾಚಾರ ಆರೋಪ, ಹುಣಸಮಾರನಹಳ್ಳಿ ಮಠದ ನಂಜೇಶ್ವರ ಶ್ರೀ ಅಂದರ್

**ಬೆಂಗಳೂರು:** ಯುವತಿಯೊಬ್ಬರ ಮೇಲೆ ಅತ್ಯಾಚಾರ ಎಸಗಿದ ಆರೋಪದ ಮೇಲೆ ಬೆಂಗಳೂರಿನ ಹುಣಸಮಾರನಹಳ್ಳಿ ಮಠದ ದಯಾನಂದ ಅಲಿಯಾಸ್ ನಂಜೇಶ್ವರ ಶಿವಾಚಾರ್ಯ ಸ್ವಾಮೀಜಿಯನ್ನು ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಯುವತಿ ನೀಡಿದ ದೂರಿನ ಆಧಾರದ ಮೇಲೆ ಎಫ್‌ಐಆರ್ ದಾಖಲಿಸಿಕೊಂಡ ಬೆಂಗಳೂರಿನ ಈಶಾನ್ಯ ವಿಭಾಗದ ಮಹಿಳಾ ಪೊಲೀಸ್ ಠಾಣೆಯ ಅಧಿಕಾರಿಗಳು, ತಕ್ಷಣವೇ ಆರೋಪಿ ಸ್ವಾಮೀಜಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಬಂಧಿತ ನಂಜೇಶ್ವರ ಶಿವಾಚಾರ್ಯ ಸ್ವಾಮೀಜಿಯನ್ನು ನೇರವಾಗಿ ಪೊಲೀಸ್ ಠಾಣೆಗೆ ಕರೆತರಲಾಗಿದ್ದು, ಖಾಕಿ ಪಡೆಯು ಈ ಕುರಿತು ಕಟ್ಟುನಿಟ್ಟಿನ ವಿಚಾರಣೆ ಮತ್ತು ತನಿಖಾ ಪ್ರಕ್ರಿಯೆಯನ್ನು ತೀವ್ರಗೊಳಿಸಿದೆ.

ಯುವತಿಯನ್ನು ಮದುವೆಯಾಗುವುದಾಗಿ ನಂಬಿಸಿ, ಅತ್ಯಾಚಾರ ಎಸಗಿದ ಹಾಗೂ ವಂಚಿಸಿದ ಆರೋಪ ಸ್ವಾಮೀಜಿ ವಿರುದ್ಧ ಕೇಳಿಬಂದಿದೆ.



ನೂರಾರು ಕೋಟಿ ಜಮೀನು ಮಾಲೀಕತ್ವ ಹೊಂದಿರುವ ವೀರಶೈವ ಸಮುದಾಯದ ಹುಣಸಮಾರನಹಳ್ಳಿಮಠವು ವೀರಶೈವ ಲಿಂಗಾಯತ ಸಮುದಾಯದ ಪಂಚಪೀಠಗಳಲ್ಲಿ ಒಂದಾದ ಶ್ರೀಶೈಲ ಮಠದ ಶಾಖಾ ಮಠವಾಗಿದೆ.

ಇದಕ್ಕೂ ಮೊದಲು, ಅಂದರೆ 2017ರ ಅಕ್ಟೋಬರ್‌ನಲ್ಲೂ ಸಹ ಸ್ವಾಮೀಜಿಯವರ ವಿರುದ್ಧ ಇದೇ ರೀತಿಯಾಗಿ ಮಹಿಳೆಯರೊಂದಿಗೆ ಅಕ್ರಮ ಸಂಬಂಧ ಹಾಗೂ ದೈಹಿಕ ಸಂಪರ್ಕದ ಆರೋಪಗಳು ಕೇಳಿಬಂದಿದ್ದು, ಆ ಸಂದರ್ಭದಲ್ಲಿ ಗ್ರಾಮಸ್ಥರು ಮತ್ತು ಭಕ್ತರು ಮಠದ ಮುಂದೆ ಪ್ರತಿಭಟನೆ ನಡೆಸಿ ಅವರನ್ನು ಕೆಳಗಿಳಿಸುವಂತೆ ಆಗ್ರಹಿಸಿದ್ದರು.

ನಂಜೇಶ್ವರ ಶಿವಾಚಾರ್ಯ ಸ್ವಾಮೀಜಿ ಅವರ ಮೇಲಿನ ವಿವಾದಗಳ ಹಿನ್ನೆಲೆ ನೋಡುವುದಾದರೆ, ಇದು ಮೊದಲ ಬಾರಿಗೆ ಕೇಳಿಬಂದಿರುವ ಆರೋಪವಲ್ಲ. ಬೆಂಗಳೂರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪವಿರುವ ಹುಣಸಮಾರನಹಳ್ಳಿ ಮಠವು ಸುಮಾರು 1500ಕ್ಕೂ ಅಧಿಕ ಎಕರೆ ಅತ್ಯಮೂಲ್ಯ ಜಮೀನನ್ನು ಹೊಂದಿರುವ ಅತ್ಯಂತ ಶ್ರೀಮಂತ ಮಠಗಳಲ್ಲಿ ಒಂದಾಗಿದ್ದು, ಇದರ ಆಸ್ತಿ ಹಾಗೂ ಜಮೀನಿಗೆ ಸಂಬಂಧಿಸಿದ ವಿವಾದಗಳು ಆಗಾಗ್ಗೆ ಮುನ್ನೆಲೆಗೆ ಬರುತ್ತಿರುತ್ತವೆ.

# 106 ಕ್ವಿಂಟಾಲ್ ಪಡಿತರ ಅಕ್ಕಿ ವಶ

**ಹೊಸಪೇಟೆ:** ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಅಧಿಕಾರಿಗಳು ವಿಜಯನಗರ ಜಿಲ್ಲೆಯಲ್ಲಿ ಭರ್ಜರಿ ಕಾರ್ಯಾಚರಣೆ ನಡೆಸಿದ್ದು, ಅಕ್ರಮವಾಗಿ ಸಾಗಿಸಲಾಗುತ್ತಿದ್ದ ಲಕ್ಷಾಂತರ ರೂಪಾಯಿ ಮೌಲ್ಯದ ಪಡಿತರ (ಪಿಡಿಎಸ್) ಅಕ್ಕಿಯನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ವಿಜಯನಗರ ಜಿಲ್ಲೆಯ ಹೂವಿನಹಡಗಲಿ ತಾಲೂಕಿನ ಹಿರೇಹಡಗಲಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ದಾಳಿ ನಡೆದಿದೆ. ನಿಯಮಬಾಹಿರವಾಗಿ ಸಾಗಣೆ-ಯಾಗುತ್ತಿದ್ದ ಸುಮಾರು ರೂ.2,38,500 ಮೌಲ್ಯದ 106 ಕ್ವಿಂಟಾಲ್ ಪಡಿತರ ಅಕ್ಕಿಯನ್ನು ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.

ಕೆಎ-25 ಎಬಿ 1751 ನೋಂದಣಿ ಸಂಖ್ಯೆಯ ವಾಹನದಲ್ಲಿ ಅಕ್ಕಿಯನ್ನು ಸಾಗಿಸಲಾಗುತ್ತಿತ್ತು. ಪರಿಶೀಲನೆ ವೇಳೆ ಅಧಿಕಾರಿಗಳು ಸಂಪೂರ್ಣ ಅಕ್ಕಿ ದಾಸ್ತಾನಿನ ಜೊತೆಗೆ ಸಾಗಾಟಕ್ಕೆ ಬಳಸಿದ ವಾಹನವನ್ನು ವಶಕ್ಕೆ ಪಡೆದು, ಮುಂದಿನ ಕಾನೂನು ಕ್ರಮಕ್ಕಾಗಿ ಕ್ರಮ ಕೈಗೊಂಡಿದ್ದಾರೆ.



ಈ ಸಂಬಂಧ ಹೂವಿನಹಡಗಲಿ ತಾಲ್ಲೂಕಿನ ಆಹಾರ ನಿರೀಕ್ಷಕ ನವೀನ್ ಕುಮಾರ್ ಅವರು ಹಿರೇಹಡಗಲಿ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದಾರೆ. ಅಕ್ರಮವಾಗಿ ಅಕ್ಕಿ ಸಾಗಾಟದಲ್ಲಿ ತೊಡಗಿದ್ದಾ-ರೆ ಎನ್ನಲಾದವರ ವಿರುದ್ಧ ಕ್ರಮ ಕೈಗೊಳ್ಳುವಂತೆ ದೂರಿನಲ್ಲಿ ಮನವಿ ಮಾಡಿದ್ದಾರೆ. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ನೀಡಿರುವ ಮಾಹಿತಿ ಹಾಗೂ ದೂರಿನ ಆಧಾರದ ಮೇಲೆ ಪೊಲೀಸರು ಮುಂದಿನ ಕ್ರಮ ಕೈಗೊಳ್ಳುವ ನಿರೀಕ್ಷೆಯಿದೆ.

ಸರ್ಕಾರದ ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ಅರ್ಹ ಫಲಾನುಭವಿಗಳಿಗೆ ವಿತರಿಸಲು ಉದ್ದೇಶಿಸಿರುವ ಪಡಿತರ ಅಕ್ಕಿಯ ಅಕ್ರಮ ಸಾಗಾಟ ಮತ್ತು ದುರುಪಯೋಗ ತಡೆಯಲು ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಿರುವ ಬೆನ್ನಲ್ಲೇ ಈ ಜಪ್ತಿ ನಡೆದಿದೆ. ಸರ್ಕಾರದ ಆಹಾರ ಭದ್ರತಾ ಯೋಜನೆಗಳಡಿ ಫಲಾನುಭವಿಗಳಿಗೆ ತಲುಪಬೇಕಾದ ಅಕ್ಕಿಯನ್ನು ಅನುಮತಿಯಿಲ್ಲದೆ ಸಾಗಿಸುವುದು ಅಥವಾ ಬೇರೆ ಉದ್ದೇಶಗಳಿಗೆ ಬಳಸುವುದು ಸಂಬಂಧಿತ ಕಾನೂನುಗಳ ಅಡಿಯಲ್ಲಿ ಕ್ರಮಕ್ಕೆ ಕಾರಣವಾಗುತ್ತದೆ.

## ಡಿಸಿಯಾದ ತಕ್ಷಣ ಕೊಂಬು ಬರುತ್ತದೆಯೇ

### ಹಾಸನ ಜಿಲ್ಲಾಧಿಕಾರಿ ವಿರುದ್ಧ ಕೇಂದ್ರ ಸಚಿವ ಕುಮಾರಸ್ವಾಮಿ ಕಿಡಿ

**ಬೆಂಗಳೂರು:** "ಜಿಲ್ಲಾಧಿಕಾರಿಯಾದ ತಕ್ಷಣ ತಲೆಯ ಮೇಲೆ ಎರಡು ಕೊಂಬು ಇದೆಯಾ? ಸ್ವಲ್ಪ ಎಚ್ಚರಿಕೆ ಇರಲಿ ಎಂದು ಹಾಸನ ಜಿಲ್ಲಾಧಿಕಾರಿಗಳ ವಿರುದ್ಧ ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ಕಿಡಿಕಾರಿದ್ದಾರೆ.

ಇತ್ತೀಚೆಗೆ ಗಣೇಶೋತ್ಸವ ವಿಚಾರವಾಗಿ ಹಾಸನ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಜಿಲ್ಲಾಧಿಕಾರಿಯಾದ ಕೆ. ಎಸ್. ಲತಾಕುಮಾರಿಯವರು ನೋಟಿಸ್ ಜಾರಿ ಮಾಡಿದ್ದರು. ಈ ವಿಷಯ ಸಾಕಷ್ಟು ಚರ್ಚೆಗೆ ಗ್ರಾಸವಾಗಿತ್ತು. ಸದ್ಯ ಕೇಂದ್ರ ಸಚಿವರು ಪ್ರತಿಕ್ರಿಯೆ ನೀಡಿದ್ದಾರೆ.



**ಜಿಲ್ಲಾಧಿಕಾರಿ ಏನು ಪಾಳೆಗಾರರಾ?:** "ನಾನು ಸುಮ್ಮನೆ ಮಾತಾಡೋದಿಲ್ಲ. ಎಸ್ಪಿಗೆ ನೋಟಿಸ್ ಕೊಡುತ್ತಾರೆ ಎಂದರೆ ಏನರ್ಥ? ಎಸ್ಪಿ ಕೂಡ ಹೆಣ್ಮಗಳು. ಜಿಲ್ಲಾಧಿಕಾರಿ ಏನು ಪಾಳೆಗಾರರಾ? ಪರಿಮಿತಿಯಲ್ಲಿ ಕೆಲಸ ಮಾಡಬೇಕು ಅಷ್ಟೆ," ಎಂದು ಹಾಸನ ಜಿಲ್ಲೆ ವಿದ್ಯಮಾನದ ವಿಚಾರವಾಗಿ ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ಎಚ್ಚರಿಸಿದ್ದಾರೆ.

**ಏನು ನಡೀತಾ ಇದೆ ಕರ್ನಾಟಕದಲ್ಲಿ?:** "ಎಲ್ಲಿ ಕೆಲಸ ಮಾಡುತ್ತಿದ್ದೀರಿ? ಅಧಿಕಾರ ನಡೆಸಬೇಕಾದರೆ ದುರಹಂಕಾರದಲ್ಲಿ ಏನು ಮಾಡುತ್ತಿದ್ದೇನೆ ಅನ್ನೋದು ಗೊತ್ತಾಗಬೇಕು ಮೊದಲು. ಅದನ್ನೆ ನಾನು ಹೇಳಿದ್ದೇನೆ. ಪೋಸ್ಟ್ ಮಾಡೋದು, ಸ್ಟೇಟಸ್ ಹಾಕೋದು ಅಂದರೆ ಏನು? ಯಾರು ಆ ಡಿಸಿಗೆ ಪೋಸ್ಟ್ ಮಾಡೋದಕ್ಕೆ ಅವಕಾಶ ಕೊಟ್ಟಿದ್ದು? ಸಾರ್ವಜನಿಕವಾಗಿ ಯಾರಾದರೂ ಮಾತನಾಡಿದರೆ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆಯಬೇಕು. ಅಷ್ಟು ಪರಿಜ್ಞಾನ ಇಲ್ಲವಾ ಈ ಜಿಲ್ಲಾಧಿಕಾರಿಗೆ? ಏನು ಪೋಸ್ಟ್ ಮಾಡ್ತಾರೆ? ಏನು ನಡೀತಾ ಇದೆ ಕರ್ನಾಟಕದಲ್ಲಿ? ಈ ಅಧಿಕಾರಿ ಕೆಪಿಎಸ್ಸಿ ಕಾರ್ಯದರ್ಶಿ ಆಗಿದ್ದಾಗ ಏನು ಮಾಡಿದ್ದರು ಎನ್ನುವುದು ಗೊತ್ತಾ? ಅವರ ಹಣೆಬರಹ ಏನು ಎನ್ನುವುದು ಗೊತ್ತಾಗುತ್ತದೆ. ಅವರನ್ನು ರಜೆಯ ಮೇಲೆ ಕಳಿಸಿ ಸಂಸ್ಪೆಂಡ್ ಮಾಡಬೇಕಿತ್ತು. ಅದು ಬಿಟ್ಟು ಹಾಸನ ಜಿಲ್ಲಾಧಿಕಾರಿ ಹುದ್ದೆಯಲ್ಲಿ ತಂದು ಕೂರಿಸಿದ್ದಾರೆ," ಎಂದು ಕಿಡಿ ಕಾರಿದರು.

### ಕರೆದುಕೊಂಡು ಬಂದು ರಕ್ಷಣೆ

**ಹಾಸನ ಜಿಲ್ಲಾಧಿಕಾರಿ ಆ ಹೆಣ್ಣಮಗಳು ಕೆಪಿಎಸ್‌ಸಿಯಲ್ಲಿಏನು ಮಾಡಿದ್ದರು ಅವರನ್ನು ಅಮಾನತು ಮಾಡಬೇಕಿತ್ತು ಆದರೆ ಇಲ್ಲಿ ಕರೆದುಕೊಂಡು ಬಂದು ರಕ್ಷಣೆ ಕೊಟ್ಟು ಇಟ್ಟುಕೊಂಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಹಾಸನದ ದೇವಿಗೆರೆಯಲ್ಲಿ ಹಲವಾರು ಗಣಪತಿಗಳನ್ನು ಬಿಟ್ಟಿದ್ದಾರೆ ಎಸ್‌ಪಿಗೆ ನೋಟೀಸ್ ಕೊಡುತ್ತಾರೆ ಎಂದರೆ ಎಸ್‌ಪಿಗೆ ಜವಾಬ್ದಾರಿ ಇಲ್ಲವೇ ಎಂದು ಪ್ರಶ್ನಿಸಿದರು. ಐಪಿಎಸ್ ಅಧಿಕಾರಿಗೆ ನೋಟೀಸ್ ಕೊಡುತ್ತಾರೆ ಹೀಗಾದರೆ ಈ ಜಿಲ್ಲೆಯಲ್ಲಿಆಡಳಿತ ಹೇಗೆ ನಡೆಸುತ್ತಾರೆ? ಜ್ಞಾನ ಇಟ್ಟುಕೊಂಡು ಕೆಲಸ ಮಾಡಬೇಕು, ಇಲ್ಲವಾದಲ್ಲಿ ಆಡಳಿತ ಕೊಲ್ಯಾಫ್ಸ್ ಆಗುತ್ತೆ ಎಂದು ಎಚ್‌ಡಿಕೆ ಬೇಸರ ವ್ಯಕ್ತಪಡಿಸಿದರು.**

ಉತ್ತರ ಕರ್ನಾಟಕ ಸುದ್ದಿಗಳು
ಕನ್ನಡ ದಿನ ಪತ್ರಿಕೆ
UTTARA KARNATKA SUDDIGALU
Kannada Daily Morning

# ಶುಭ್ರ ಬಿಳಿ



ಸುವರ್ಣಾ ರೋಣ



ವಿಜಯಲಕ್ಷ್ಮಿ ಕರಡಿಮಠ ಗಂಗಾವತಿ



ಬಸವೇಶ್ವರ ಮಹಿಳಾ ಮಂಡಳಿ, ಶಿವಾನಂದ ನಗರ ರೋಣ



ಬನಶ್ರೀ ಶಿವಪ್ಪಯ್ಯನಮಠ ಯಲಬುರ್ಗಾ



ಸಹನಾ ಹಿರೇಮಠ, ಗಂಗಾವತಿ



ಜಿಲ್ಲಾ ಆಸ್ಪತ್ರೆ ಸಿಬ್ಬಂದಿ ಬಾಗಲಕೋಟೆ



ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಿಬ್ಬಂದಿ ರೋಣ



ಗಂಗಾ, ಶಿಲ್ಪಾ, ಸುಪ್ರಿಯಾ, ಅನುಷ್ಕಾ ಹುಡ್ಕೋ ಕಾಲೋನಿ ಗದಗ



ಶ್ರೀಷಾ ಪ್ರಭನ್ನವರ ಬಾಗಲಕೋಟೆ



ಅಮೃತಾ ಜವಳಿ, ಕೊಪ್ಪಳ



ಎಂ.ಟಿ. ಅವಧೂತ ಗಜೇಂದ್ರಗಡ



ಸುಮಾ ಹಿರೇಮಠ



ಕವಿತಾ, ಸವಿತಾ, ರಾಜೇಶ್ವರಿ, ಸುಷ್ಮಾ, ಶಾಂಭವಿ, ಶ್ರೀನಗರ ರೋಣ



ಗಿರಿಜಾಬಾಯಿ ಬಡ್ಡಿ, ಎನ್.ಸಿ ಶೆಟ್ಟರ್, ಜ್ಯೋತಿ ಗೆಳತಿಯರು ಬಾಗಲಕೋಟೆ



ಲತಾ ಕೋರಿ, ಗೆಳತಿಯರು ಹಿರೇಜಂತಕಲ್, ಗಂಗಾವತಿ



ರಾಜೀವಗಾಂಧಿ ಮಹಾವಿದ್ಯಾಲಯದ ಸಿಬ್ಬಂದಿ ರೋಣ



ದ್ಯಾಮವ್ವ ದೇವಿ ದೇವಸ್ಥಾನ, ಹುಲಕೋಟಿ



ಗೀತಾ ಹಡಗಲಿ ಸ್ನೇಹಿತೆಯರು, ಮುಂಡರಗಿ



ಬ್ರೈಟ್ ಹಾರಿಝೋನ್ ಪೂರ್ವ ಪ್ರಾಥಮಿಕ ಶಾಲೆ ಶಿಕ್ಷಕಿಯರು. ಕಳಸಾಪುರ ರೋಡ್ ಗದಗ್



ಆರಾಧ್ಯ ನಿಂಗಪ್ಪ ಮುದಗಲ್ಲ ಶಿಗ್ಲಿ

UTTARA KARNATAKA SUDDIGALU
Kannada Daily Morning

ಉತ್ತರ ಕರ್ನಾಟಕ ಸುದ್ದಿಗಳು
ಕನ್ನಡ ದಿನ ಪತ್ರಿಕೆ

ಮಂಗಳವಾರ 13 ಅಕ್ಟೋಬರ್ 2026
13 OCTOBER 2026



# ರಬಕವಿಯಲ್ಲಿ ಅದ್ದೂರಿಯಾಗಿ ಜರುಗಿದ ಶ್ರೀ ದುರ್ಗಾದೇವಿ ಮೂರ್ತಿ ಮೆರವಣಿಗೆ

**ಬಾಗಲಕೋಟೆ:** ಜಿಲ್ಲೆಯ ರಬಕವಿ–ಬನಹಟ್ಟಿ ತಾಲ್ಲೂಕಿನ ರಬಕವಿಯ ಸಿಕ್ಕಲಗಾರ ಸಮಾಜದ ವತಿಯಿಂದ ಸತತ ಮೂರನೇ ವರ್ಷದ ಶ್ರೀ ದುರ್ಗಾದೇವಿ ಮೂರ್ತಿ ಪ್ರತಿಷ್ಠಾಪನೆ ಅಂಗವಾಗಿ ಅದ್ದೂರಿ ಮೆರವಣಿಗೆ ಜರುಗಿತು.

ರಾಮಪುರದ ಶ್ರೀ ನೀಲಕಂಠೇಶ್ವರ ಮಠದಿಂದ ರಬಕವಿಯ ಸಿಕ್ಕಲಗಾರ ಗಲ್ಲಿಯವರೆಗೆ ಶ್ರೀ ದುರ್ಗಾದೇವಿ ಮೂರ್ತಿಯನ್ನು ವಾದ್ಯಮೇಳಗಳ ಸಂಭ್ರಮ ಹಾಗೂ ಕುಂಭಮೇಳದೊಂದಿಗೆ ಭವ್ಯವಾಗಿ ಮೆರವಣಿಗೆ ಮೂಲಕ ಕರೆತರಲಾಯಿತು. ಮೆರವಣಿಗೆಯಲ್ಲಿ ಮಹಿಳೆಯರು ಕುಂಭ ಹೊತ್ತು ಪಾಲ್ಗೊಂಡು, ಭಕ್ತಿಭಾವದಿಂದ ಶ್ರೀ ದುರ್ಗಾದೇವಿ ಮೂರ್ತಿಯನ್ನು ಬರಮಾಡಿಕೊಂಡರು.

ವಾದ್ಯಮೇಳಗಳ ಸದ್ದು, ಭಕ್ತರ ಉತ್ಸಾಹ ಹಾಗೂ ಧಾರ್ಮಿಕ ಸಂಭ್ರಮದ ನಡುವೆ ಮೆರವಣಿಗೆ ಅದ್ದೂರಿಯಾಗಿ ನೆರವೇರಿತು.

ಸಿಕ್ಕಲಗಾರ ಸಮಾಜದ ಧಾರ್ಮಿಕ ಪರಂಪರೆ ಹಾಗೂ ಭಕ್ತಿ ಭಾವವನ್ನು ಪ್ರತಿಬಿಂಬಿಸುವ ಈ ಕಾರ್ಯಕ್ರಮದಲ್ಲಿ ಸಮಾಜದ ಮುಖಂಡರು, ಯುವಕರು ಹಾಗೂ ಭಕ್ತರು ಭಾಗವಹಿಸಿದರು.

ಇನ್ನು ಶ್ರೀ ದುರ್ಗಾದೇವಿ ಉತ್ಸವದ ಅಂಗವಾಗಿ ಸತತ ಒಂಬತ್ತು ದಿನಗಳ ಕಾಲ ಅನ್ನಪ್ರಸಾದ ಸೇವೆಯನ್ನು ಆಯೋಜಿಸಲಾಗಿದೆ ಎಂದು ಸಿಕ್ಕಲಗಾರ ಸಮಾಜದ ಶ್ರೀ ದುರ್ಗಾದೇವಿ ಯುವಕ ಸಂಘದ ಪದಾಧಿಕಾರಿಗಳು ತಿಳಿಸಿದರು.

ಒಟ್ಟಿನಲ್ಲಿ, ರಬಕವಿಯಲ್ಲಿ ಶ್ರೀ ದುರ್ಗಾದೇವಿ ಮೂರ್ತಿ ಮೆರವಣಿಗೆ ಭಕ್ತಿಭಾವ ಮತ್ತು ಧಾರ್ಮಿಕ ಸಂಭ್ರಮದೊಂದಿಗೆ ಅದ್ದೂರಿಯಾಗಿ ಜರುಗಿತು.



**ಪರಿಶಿಷ್ಟ ಜಾತಿ, ಪಂಗಡಗಳ ಕುಂದುಕೊರತೆ ಸಭೆ: ವಿವಿಧ ಸಮಸ್ಯೆಗಳ ಪ್ರಸ್ತಾಪ**

# ಅನಧಿಕೃತ ಮದ್ಯ ಮಾರಾಟಕ್ಕೆ ಕಡಿವಾಣ ಹಾಕಲು ಮುಖಂಡರ ಆಗ್ರಹ

**ಗಂಗಾವತಿ:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಸಮಸ್ಯೆಗಳನ್ನು ಆಲಿಸಿ, ಅವುಗಳಿಗೆ ಸೂಕ್ತ ಪರಿಹಾರ ಕಲ್ಪಿಸುವ ಉದ್ದೇಶದಿಂದ ಕೊಪ್ಪಳ ಜಿಲ್ಲಾ ಪೊಲೀಸ್ ಇಲಾಖೆ ಹಾಗೂ ಗಂಗಾವತಿ ಉಪವಿಭಾಗದ ವತಿಯಿಂದ ಸೋಮವಾರ ನಗರದ ಭಾರತೀಯ ವೈದ್ಯಕೀಯ ಸಂಘದ (ಐಎಂಎ) ಸಭಾಂಗಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕುಂದುಕೊರತೆ ಸಭೆ ಆಯೋಜಿಸಲಾಗಿತ್ತು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಡಿವೈಎಸ್ಪಿ ಜೆ.ಎಸ್. ನ್ಯಾಮಗೌಡರ್ ಮಾತನಾಡಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯದ ಮುಖಂಡರು ತಮ್ಮ ಸಮಸ್ಯೆಗಳನ್ನು ಮುಕ್ತವಾಗಿ ಹಂಚಿಕೊಳ್ಳಬೇಕು. ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿ, ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳೊಂದಿಗೆ ಚರ್ಚಿಸುವ ಮೂಲಕ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಕಂಡುಕೊಳ್ಳುವುದು ಸಭೆಯ ಮುಖ್ಯ ಉದ್ದೇಶವಾಗಿದೆ. ಸಾರ್ವಜನಿಕರ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಎಲ್ಲರೂ ಸಹಕರಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಅನಧಿಕೃತ ಮದ್ಯ ಮಾರಾಟಕ್ಕೆ ಕಡಿವಾಣ ಹಾಕುವಂತೆ ಮುಖಂಡರು ಆಗ್ರಹಿಸಿದರು. ಇಂತಹ ಚಟುವಟಿಕೆಗಳಿಂದ ಸಾರ್ವಜನಿಕರಿಗೆ ತೊಂದರೆ–ಯಾಗುತ್ತಿದ್ದು, ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಂಡು ಅನಧಿಕೃತ ಮದ್ಯ ಮಾರಾಟವನ್ನು ತಡೆಯಬೇಕು ಎಂದು ಒತ್ತಾಯಿಸಿದರು. ಅಲ್ಲದೆ, ಸಮುದಾಯದ ಜನರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳ ಕುರಿತು ಚರ್ಚಿಸಿ, ಅವುಗಳಿಗೆ ಪರಿಹಾರ ಕಲ್ಪಿಸುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಗಂಗಾವತಿ ನಗರ ಪೊಲೀಸ್ ಠಾಣೆ–ಯ ಪೊಲೀಸ್ ಇನ್‌ಸ್ಪೆಕ್ಟರ್ ಪ್ರಕಾಶ ಯಾತನೂರು, ಗಂಗಾವತಿ ಗ್ರಾಮೀಣ ಪೊಲೀಸ್ ಠಾಣೆಯ ಸಿಪಿಐ ರಂಗಪ್ಪ ಆರ್. ದೊಡ್ಡಮನಿ, ಕನಕಗಿರಿ ಪೊಲೀಸ್ ಠಾಣೆಯ ಸಿಪಿಐ ಶಿವರಾಜ ಇಂಗಳೆ, ಕಾರಟಗಿ ಪೊಲೀಸ್ ಇನ್‌ಸ್ಪೆಕ್ಟರ್ ಸುಧೀರ್ ಬೆಂಕಿ, ಕುಷ್ಟಗಿ ಪಿಎಸ್‌ಐ ಹನುಮಂತಪ್ಪ ತಳವಾರ, ಹನುಮಸಾಗರ ಪಿಎಸ್‌ಐ ಧನಂಜಯ ಎಂ. ಹಾಗೂ ತಾವರಗೇರಿ ಪಿಎಸ್‌ಐ ಚಂದ್ರಪ್ಪ ಹೆಚ್. ಮುಖಂಡರಾದ ಜೋಗದ ನಾರಾಯಣಪ್ಪ ನಾಯಕ, ಹನುಮಂತಪ್ಪ ನಾಯಕ, ದಳಪತಿ ದುರಗಪ್ಪ ನಾಯಕ, ಹಂಚಿನಾಳ ಹುಸೇನಪ್ಪ ವಕೀಲರು , ದುರಗಪ್ಪ ನಾಯಕ, ಹುಲ್ಲೇಶ ದೇವರಮನಿ ಸೇರಿದಂತೆ ವಿವಿಧ ಸಮುದಾಯಗಳ ಮುಖಂಡರು ಹಾಗೂ ಇತರರು ಭಾಗವಹಿಸಿದ್ದರು.




# ಕುದರಿಮೋತಿ ತಾ.ಪಂ. ಮಹಿಳಾ 2ಎ ಮೀಸಲು ಕ್ಷೇತ್ರಕ್ಕೆ ಬಸಮ್ಮ ಪಂಪಾಪತಿ ವಣಗೇರಿ?

**ಕುಕನೂರು:** 2026ರ ಜಿಲ್ಲಾ ಹಾಗೂ ತಾಲೂಕು ಪಂಚಾಯಿತಿ ಚುನಾವಣೆ ಹಿನ್ನೆಲೆಯಲ್ಲಿ ಕುದರಿಮೋತಿ ತಾಲೂಕು ಪಂಚಾಯಿತಿ ಕ್ಷೇತ್ರವು ಮಹಿಳಾ 2ಎ ಮೀಸಲಾತಿಗೆ ಒಳಪಟ್ಟಿದ್ದು, ಈ ಕ್ಷೇತ್ರದಿಂದ ಭಾರತೀಯ ಜನತಾ ಪಕ್ಷದ ಅಭ್ಯರ್ಥಿಯಾಗಿ ಬಸಮ್ಮ ಪಂಪಾಪತಿ ವಣಗೇರಿ ಅವರ ಹೆಸರು ಮುಂಚೂಣಿಯಲ್ಲಿದೆ.




ಬಿಜೆಪಿ ಪಕ್ಷದ ಸ್ಥಳೀಯ ಮುಖಂಡರು ಹಾಗೂ ಕಾರ್ಯಕರ್ತರ ವಲಯದಲ್ಲಿ ಬಸಮ್ಮ ಪಂಪಾಪತಿ ವಣಗೇರಿ ಅವರ ಅಭ್ಯರ್ಥಿತ್ವದ ಕುರಿತು ಚರ್ಚೆ ನಡೆಯುತ್ತಿದ್ದು, ಪಕ್ಷದ ಅಧಿಕೃತ ಅಭ್ಯರ್ಥಿ ಆಯ್ಕೆ ಹಾಗೂ ಟಿಕೆಟ್ ಘೋಷಣೆಯತ್ತ ಕ್ಷೇತ್ರದ ರಾಜಕೀಯ ವಲಯದ ಗಮನ ನೆಟ್ಟಿದೆ.

ಕ್ಷೇತ್ರದಲ್ಲಿ ಪಕ್ಷದ ಸಂಘಟನೆ ಹಾಗೂ ಸ್ಥಳೀಯ ರಾಜಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಬಸಮ್ಮ ಪಂಪಾಪತಿ ವಣಗೇರಿ ಅವರ ಹೆಸರು ಪ್ರಮುಖವಾಗಿ ಕೇಳಿಬರುತ್ತಿದೆ. ಬಿಜೆಪಿ ಪಕ್ಷದಿಂದ ಅಧಿಕೃತವಾಗಿ ಟಿಕೆಟ್ ಘೋಷಣೆಯಾದ ಬಳಿಕವೇ ಅವರ ಅಭ್ಯರ್ಥಿತ್ವ ಅಂತಿಮವಾಗಲಿದೆ.

# ಅ. 13ರಂದು ದಸರಾ ಕಾವ್ಯೋತ್ಸವ

**ಗದಗ:** ಎಸ್.ಎಸ್. ಆಡಿನ ಜನಸೇವಾ ಸಂಸ್ಥೆ (ರಿ.), ಹೊಳೆಆಲೂರ ಹಾಗೂ ಭಾರತೀಯ ದಲಿತ ಸಾಹಿತ್ಯ ಅಕಾಡೆಮಿ, ಗದಗ ಜಿಲ್ಲಾ ಶಾಖೆಯ ಸಹಯೋಗದಲ್ಲಿ ಅಕ್ಟೋಬರ್ 13ರಂದು ಮಂಗಳವಾರ ಬೆಳಿಗ್ಗೆ 10.30ಕ್ಕೆ ನಗರದ ಹಾತಲಗೇರಿ ನಾಕದ ಹಾಲಕೇರಿ ಮಠದ ಅನ್ನದಾನೇಶ್ವರ ಪದವಿಪೂರ್ವ ಕಾಲೇಜಿನಲ್ಲಿ ದಸರಾ ಕಾವ್ಯೋತ್ಸವ–2026 ಆಯೋಜಿಸಲಾಗಿದೆ.

ಕಾರ್ಯಕ್ರಮವನ್ನು ರಾಜ್ಯ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತ ಡಿ.ಎಚ್. ಪರಂಗಿ ಅವರು ಉದ್ಘಾಟಿಸಲಿದ್ದು, ಭಾರತೀಯ ದಲಿತ ಸಾಹಿತ್ಯ ಅಕಾಡೆಮಿಯ ಗದಗ ಜಿಲ್ಲಾ ಶಾಖೆಯ ಅಧ್ಯಕ್ಷ ಬಸವರಾಜ ಎಂ. ಕಡೆಮನಿ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

ಎಸ್.ಎಸ್. ಆಡಿನ ಜನಸೇವಾ ಸಂಸ್ಥೆಯ ರಾಜ್ಯಾಧ್ಯಕ್ಷೆ ಶೋಭಾ ಎಸ್. ಆಡಿನ ಅವರು ರೇಣುಕಾ ಮಾದರ ರಚಿಸಿರುವ 'ಕಣ್ಣಂಚಿನ ಕಾವ್ಯ' ಪುಸ್ತಕ ಬಿಡುಗಡೆಗೊಳಿಸಲಿದ್ದಾರೆ. ಹೊಳೆಆಲೂರ ವಾಣಿಜ್ಯೋದ್ಯಮ ಸಂಸ್ಥೆಯ ಮಾಜಿ ಅಧ್ಯಕ್ಷ ಎಚ್.ಕೆ. ಪಟೇಲ್ ಅವರು ಮಾತೋಶ್ರೀ ಫೌಂಡೇಶನ್‌ನ ಲೋಗೊ ಅನಾವರಣಗೊಳಿಸಲಿದ್ದಾರೆ. ವಿ.ವಿ. ಹಿರೇಮಠ ಮೆಮೋರಿಯಲ್ ಪ್ರತಿಷ್ಠಾನದ ಅಧ್ಯಕ್ಷೆ ವಿ.ವಿ. ಹಿರೇಮಠ, ಎಸ್.ಎ. ಕಾಲೇಜಿನ ಪ್ರಾಚಾರ್ಯ ವಿದ್ಯಾಸಾಗರ ಎ.ಎಂ., ಈಶ್ವರ ದೇವಸ್ಥಾನ ಕಮಿಟಿಯ ಅಧ್ಯಕ್ಷ ಚನ್ನಬಸಪ್ಪ ಅಕ್ಕಿ, ನಿವೃತ್ತ ಶಿಕ್ಷಕ ಕೆ.ಎಸ್. ಬಾರಕೇರ, ಮಾತೋಶ್ರೀ ಫೌಂಡೇಶನ್ ಅಧ್ಯಕ್ಷ ಸತೀಶ ಮುಂಡಾಸದ ಹಾಗೂ ಪೂರ್ಣ ತಾರೆ ಜನಸೇವಾ ಸಂಸ್ಥೆಯ ಅಧ್ಯಕ್ಷ ಬಸವರಾಜ ನೆಲಜೇರಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಬಂಗಾರಗುಂಡ ಗುಡದಪ್ಪ ಅವರು ಪುಸ್ತಕ ಪರಿಚಯ ಮಾಡಿಕೊಡಲಿದ್ದು, ಎಸ್.ಕೆ. ಆಡಿನ ಅವರು ಸ್ವಾಗತಿಸಲಿದ್ದಾರೆ.

**ಸಾಧಕರಿಗೆ ದಸರಾ ಸಾಧಕ ರತ್ನ ಗೌರವ:** ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಪ್ರಲ್ಹಾದ ಮುಡಾಸದ, ವಿನೋದ ಸಿ. ಪಟೇಲ್, ಎಂ.ಎಸ್. ಶೀಲವಂತ, ಮೀನಾಕ್ಷಿ ಶಿ. ಬೆನಕಣ್ಣವರ, ಶಕುಂತಲಾ ಎಚ್. ಅಕ್ಕಿ ಹಾಗೂ ಮಂಜುಳಾ ಚ. ಅಕ್ಕಿ ಅವರಿಗೆ ದಸರಾ ಸಾಧಕ ರತ್ನ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಗುವುದು.

**ದಸರಾ ನಾದ– ಕುಂಚ ಸಂಭ್ರಮ ಹಾಗೂ ಕವಿಗೋಷ್ಠಿ:** ಬಸವರಾಜ ನೆಲಜೇರಿ, ರಮೇಶ ಹಾದಿಮನಿ, ಪ್ರಕಾಶ ಕಮ್ಮಾರ ಹಾಗೂ ಮೇಘಾ ಮುದ್ದಿ ಅವರಿಂದ ದಸರಾ ನಾದ–ಕುಂಚ ಸಂಭ್ರಮ ನಡೆಯಲಿದೆ.

ಕವಿಗೋಷ್ಠಿಯ ಅಧ್ಯಕ್ಷತೆಯನ್ನು ಆಯ್.ಕೆ. ಕಮ್ಮಾರ ಅವರು ವಹಿಸಲಿದ್ದು, ಎ.ಎಸ್. ಮಕಾನದಾರ ಅವರು ಆಶಯ ನುಡಿ ನೀಡಲಿದ್ದಾರೆ. ಕವಿಗೋಷ್ಠಿಯಲ್ಲಿ ಸುಮಾರು 35 ಕವಿಗಳು ಭಾಗವಹಿಸಿ ತಮ್ಮ ಸ್ವ–ರಚಿತ ಕವನಗಳನ್ನು ವಾಚಿಸಲಿದ್ದಾರೆ. ಸಾಹಿತ್ಯ, ಕಲೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಆಯೋಜಿಸಿರುವ ಈ ದಸರಾ ಕಾವ್ಯೋತ್ಸವದಲ್ಲಿ ಸಾಹಿತ್ಯಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಬೇಕು ಎಂದು ಸಂಸ್ಥೆಯ ಕಾರ್ಯದರ್ಶಿ ನೀಲವ್ವ ತಳವಾರ ತಿಳಿಸಿದ್ದಾರೆ.

# ಹಳೆಯ ಮೇನ್‌ಲೈನ್ ತೆರವಿಗೆ ಜೆಸ್ಕಾಂ ಕ್ರಮ: ಸಾರ್ವಜನಿಕರ ಮೆಚ್ಚುಗೆ

**ಕುಕನೂರು:** ಪಟ್ಟಣದ ಕುದರಿಮೋತಿ ಗ್ರಾಮದ ಆಶ್ರಯ ಕಾಲೋನಿ ಹಾಗೂ ವೇಷಗಾರ ಕಾಲೋನಿಯಲ್ಲಿ ಹಾದು ಹೋಗಿದ್ದ ಹಳೆಯ ಮೇನ್‌ಲೈನ್ ವಿದ್ಯುತ್ ತಂತಿಯನ್ನು ತೆರವುಗೊಳಿಸಲು ಜೆಸ್ಕಾಂ ಇಲಾಖೆ ಮುಂದಾಗಿರುವುದಕ್ಕೆ ಸ್ಥಳೀಯ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಈ ಪ್ರದೇಶದಲ್ಲಿ ಈಗಾಗಲೇ ಹೊಸ ವಿದ್ಯುತ್ ಲೈನ್ ಅಳವಡಿಸಲಾಗಿದ್ದು, ಹಳೆಯ ಮೇನ್‌ಲೈನ್ ತಂತಿ ಹಾಗೆಯೇ ಉಳಿದಿದ್ದರಿಂದ ಸಾರ್ವಜನಿಕರಿಗೆ ಹಲವು ರೀತಿಯ ತೊಂದ–ರೆ ಉಂಟಾಗುತ್ತಿತ್ತು. ಹಳೆಯ ಲೈನ್ ತೆರವುಗೊಳಿಸುವಂತೆ ಸಾರ್ವಜನಿಕರು ಮನವಿ ಮಾಡಿದ್ದ ಹಿನ್ನೆಲೆಯಲ್ಲಿ ಜೆಸ್ಕಾಂ ಅಧಿಕಾರಿಗಳು ಕ್ರಮ ಕೈಗೊಂಡಿದ್ದಾರೆ.

ಹೊಸ ಲೈನ್ ಅಳವಡಿಕೆಯ ಬಳಿಕ ಬಳಕೆಯಲ್ಲಿಲ್ಲದ ಹಳೆಯ ಮೇನ್‌ಲೈನ್ ತಂತಿಯನ್ನು ತೆರವುಗೊಳಿಸುವ ಕಾರ್ಯಕ್ಕೆ ಜೆಸ್ಕಾಂ ಎಇಇ ನಾಗರಾಜ ಅವರು ಸ್ಪಂದಿಸಿ ಕ್ರಮ ಕೈಗೊಂಡಿರುವುದು ಶ್ಲಾಘನೀಯ ಎಂದು ಸ್ಥಳೀಯರು ತಿಳಿಸಿದ್ದಾರೆ.

ಹಳೆಯ ವಿದ್ಯುತ್ ತಂತಿ ತೆರವುಗೊಳಿಸುವುದರಿಂದ ಸಾರ್ವಜನಿಕರ ಸುರಕ್ಷತೆಗೆ ಅನುಕೂಲವಾಗಲಿದ್ದು, ಅನಗತ್ಯವಾಗಿ ರಸ್ತೆಯಲ್ಲಿ ಹಾಗೂ ವಸತಿ ಪ್ರದೇಶದಲ್ಲಿ ಉಳಿದಿದ್ದ ವಿದ್ಯುತ್ ತಂತಿಯಿಂದ ಉಂಟಾಗುತ್ತಿದ್ದ ತೊಂದರೆ ಕೂಡ ನಿವಾರಣೆಯಾಗಲಿದೆ. ಸಾರ್ವಜನಿಕರ ಸಮಸ್ಯೆಗೆ ಸ್ಪಂದಿಸಿ ತ್ವರಿತವಾಗಿ ಕ್ರಮ ಕೈಗೊಂಡ ಜೆಸ್ಕಾಂ ಎಇಇ ನಾಗರಾಜ ಹಾಗೂ ಇಲಾಖೆಯ ಸಿಬ್ಬಂದಿಗೆ ಸ್ಥಳೀಯರು ಕೃತಜ್ಞತೆ ಸಲ್ಲಿಸಿದ್ದಾರೆ.



# ಸ್ವಸಹಾಯ ಸಂಘಗಳ ಗುಂಪುಗಳ ಸಹಾಯಧನ ಹಿಂಪಡೆದ ಸರ್ಕಾರದ ನಡೆಗೆ ಖಂಡನೆ

**ಗಜೇಂದ್ರಗಡ:** PMFME ನಲ್ಮ್ ಯೋಜನೆಯಡಿ ಸ್ವಸಹಾಯ ಗುಂಪುಗಳ ಮಹಿಳೆಯರಿಗೆ ಮಂಜೂರು ಮಾಡಬೇಕಾದ ಸಹಾಯಧನವನ್ನು ಸರ್ಕಾರವು ಯಾವುದೇ ಮಾಹಿತಿಯನ್ನು ಪುರಸಭೆಗೆ ತಿಳಿಸದೇ ಹಿಂಪಡೆದಿರುವುದು ನಿಜಕ್ಕೂ ಖಂಡನೀಯ ಎಂದು ವಕೀಲ ದಾವಲಸಾಬ ತಾಳಿಕೋಟಿ ತಿಳಿಸಿದರು.

ಜನವಾದಿ ಮಹಿಳಾ ಸಂಘಟನೆ ನೇತೃತ್ವದಲ್ಲಿ ಪುರಸಭೆ ಮುಭಾಂಗದಲ್ಲಿ ಪ್ರತಿಭಟನೆ ನಡೆಸಿ ಮುಖ್ಯಾಧಿಕಾರಿಗಳ ಮೂಲಕ ಜಿಲ್ಲಾಧಿಕಾರಿಗಳಿಗೆ, ಶಾಸಕರಿಗೆ ಮನವಿ ಸಲ್ಲಿಸಿ ಅವರು ಮಾತನಾಡಿದರು.

ನಲ್ಮ್ ದಿಂದ ಕೆಪ್ಯಾಕ್ ಸಂಸ್ಥೆಗೆ ಸಾಲದ ರೂಪದ ಹಣ ಬಿಡುಗಡೆ ಆಗಿದ್ದು ಯಾವುದೇ ಮಾಹಿತಿಯನ್ನು ಪುರಸಭೆಗೆ ನೀಡದೆ ಹಣವನ್ನು ಹಿಂಪಡೆದಿರುವುದು ಸರಿಯಲ್ಲ. ಕೂಡಲೇ ಅನುದಾನವನ್ನು ಮರುಬಿಡುಗಡೆ ಮಾಡಿ ಮಹಿಳಾ ಫಲಾನುಭವಿಗಳಿಗೆ ಮಂಜೂರು ಮಾಡುವಂತೆ ಒತ್ತಾಯಿಸಿದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ ಅನುಷ್ಠಾನಗೊಳ್ಳುತ್ತಿರುವ (ಪ್ರಧಾನಮಂತ್ರಿ ಸೂಕ್ಷ್ಮ ಆಹಾರ ಸಂಸ್ಕರಣಾ ಉದ್ದಿಮೆಗಳ ಔಪಚಾರಿಕೀಕರಣ ಯೋಜನೆ) ಅಡಿಯಲ್ಲಿ ಮಹಿಳಾ ಸ್ವಸಹಾಯ ಗುಂಪುಗಳಿಗೆ ಆರ್ಥಿಕ ನೆರವು ಒದಗಿಸುವ ಉದ್ದೇಶದಿಂದ ಇದನ್ನು ಮಂಜೂರು ಮಾಡುವ ಪ್ರಕ್ರಿಯೆ ಕೈಗೊಳ್ಳಲಾಗಿತ್ತು.

ಆದರೆ, ಸಂಬಂಧಪಟ್ಟ ಮಹಿಳಾ ಸ್ವಸಹಾಯ ಗುಂಪುಗಳಿಗೆ ಸದರಿ ಸಹಾಯಧನವನ್ನು ಮಂಜೂರು ಮಾಡಿ ವಿತರಿಸುವ ಪ್ರಕ್ರಿಯೆ ಪೂರ್ಣಗೊಳ್ಳುವ



ಮುನ್ನವೇ ಸರ್ಕಾರವು ಯಾವುದೇ ಮುಂಚಿತ ಮಾಹಿತಿ ನೀಡದೆ ಅಥವಾ ಸ್ಪಷ್ಟ ಕಾರಣಗಳನ್ನು ತಿಳಿಸದೆ ಪುರಸಭೆಗೆ ಬಿಡುಗಡೆ ಮಾಡಿದ್ದ ಹಣವನ್ನು ಮರಳಿ ಹಿಂಪಡೆದಿರುವುದು ತಿಳಿದುಬಂದಿದೆ ಎಂದರು.

ಜನವಾದಿ ಮಹಿಳಾ ಸಂಘದ ಮುಖಂಡೆ ಅಕ್ಕಮ್ಮ ರಾಠೋಡ ಮಾತನಾಡಿ ಸರ್ಕಾರದ ಯೋಜನೆಯಡಿ ಸಹಾಯಧನದ ನಿರೀಕ್ಷೆಯಲ್ಲಿದ್ದ ಮಹಿಳಾ ಸ್ವಸಹಾಯ ಗುಂಪುಗಳಿಗೆ ತೀವ್ರ ನಿರಾಸೆಯುಂಟಾಗಿದ್ದು, ತಮ್ಮ ಸಣ್ಣ ಉದ್ಯಮಗಳನ್ನು ಪ್ರಾರಂಭಿಸಲು ಹಾಗೂ ಈಗಾಗಲೇ ಕೈಗೊಂಡಿರುವ ಉದ್ಯಮ ಚಟುವಟಿಕೆಗಳನ್ನು ಮುಂದುವರಿಸಲು ಆರ್ಥಿಕ ತೊಂದರೆ ಎದುರಿಸುವಂತಾಗಿದೆ. ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿ ಮಾಡುವುದು, ಅವರ ಆದಾಯವನ್ನು ಹೆಚ್ಚಿಸುವುದು ಮತ್ತು ಸಣ್ಣ ಆಹಾರ ಸಂಸ್ಕರಣಾ ಉದ್ಯಮಗಳಿಗೆ ಪ್ರೋತ್ಸಾಹ ನೀಡುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿರುವುದರಿಂದ, ಅನುದಾನ ಹಿಂಪಡೆಯುವಿಕೆಯಿಂದ ಯೋಜನೆಯ ಉದ್ದೇಶವೇ ಹಿನ್ನಡೆಯಾಗುವ ಪರಿಸ್ಥಿತಿ ನಿರ್ಮಾಣವಾಗಿದೆ.

ಆದ್ದರಿಂದ, ಮಹಿಳಾ ಸ್ವಸಹಾಯ ಗುಂಪುಗಳ ಹಿತದೃಷ್ಟಿಯಿಂದ ಹಾಗೂ ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಉತ್ತೇಜನ ನೀಡುವ ಸಲುವಾಗಿ ಈ ಮನವಿಯನ್ನು ತುರ್ತಾಗಿ ಪರಿಗಣಿಸಿ, ಹಿಂಪಡೆಯಲಾದ ಅನುದಾನವನ್ನು ಶೀಘ್ರವಾಗಿ ಮರುಮಂಜೂರು ಮಾಡಿ ಅರ್ಹ ಮಹಿಳಾ ಸ್ವಸಹಾಯ ಗುಂಪುಗಳಿಗೆ ತಲುಪಿಸುವಂತೆ ಸಂಬಂಧಪಟ್ಟ ಇಲಾಖೆಗೆ ಸೂಕ್ತ ನಿರ್ದೇಶನ ನೀಡಬೇಕೆಂದು

15 ದಿನಗಳೊಳಗೆ ಸಹಾಯಧನ ನೀಡದೆ ಇದ್ದ–ರೆ ಪುರಸಭೆ ಮುಂದೆ ಅನಿರ್ದಿಷ್ಟಾವಧಿ ಧರಣಿ ನಡೆಸಲಾಗುವುದು ಎಂದರು.

ಮನವಿ ಸ್ವೀಕರಿಸಿ ಮಾತನಾಡಿದ ಸಮುದಾಯದ ಸಂಘಟನಾಧಿಕಾರಿ ಹನಮಂತಮ್ಮ ನಾಯಕ್ ಈ ಸಮಸ್ಯೆ ಇಡೀ ರಾಜ್ಯಾದ್ಯಂತ ಇರುವುದರಿಂದ ಸಂಬಂಧಿಸಿದ ಇಲಾಖೆಯವರಿಗೆ ಅನೇಕ ಬಾರಿ ಪತ್ರ ಬರೆಯಲಾಗಿದ್ದು ತ್ವರಿತಗತಿಯಲ್ಲಿ ಸಮಸ್ಯೆ ಬಗೆರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಆದ್ದರಿಂದ, ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಮಹಿಳಾ ಸ್ವಸಹಾಯ ಗುಂಪುಗಳಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಕೆಳಕಂಡ ಕ್ರಮಗಳನ್ನು ತುರ್ತಾಗಿ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಈ ಪ್ರತಿಭಟನೆಯಲ್ಲಿ ಕಮಲವ್ವ ಮುಧೋಳ, ಚೆನ್ನಮ್ಮ ಗುರಿಕಾರ, ಮಮತ್ತಾಜ ತಾಳಿಕೋಟಿ, ಶಾರಾದ ಕಲ್ಮಶೆಟ್ಟಿ, ರೇಣಕಾ ಕರಡಿ, ಸಾವಿತ್ರಿ ಯೆಂಕಚ್ಚಿ, ಬೀಬಿಜಾನ ಜಂಗ್ಲೀ, ರೇಣುಕಾ ರಾಮಜಿ, ಸುಪ್ರೀತಾ ರಾಮಜಿ, ದ್ರಾಕ್ಷಯಿಣಿ ಬೂದಿಹಾಳ, ದಾವಲಬಿ ನಂದಿಹಾಳ, ಈರಮ್ಮ ಟೆಂಗಿನಕಾಯಿ, ಮಂಜುಳಾ ಚಿಟಗಿ, ನಾಗಮ್ಮ ರಾಮಜಿ, ದಾವಲಬಿ ಅಬ್ಬಿಗೇರಿ ಸೇರಿದಂತೆ ಇತರರು ಪಾಲ್ಗೊಂಡಿದ್ದರು.



**ಲಕ್ಷ್ಮೇಶ್ವರದ ದೊಡ್ಡುರು ಗ್ರಾಮದಲ್ಲಿ ನಿನ್ನೆ ನವರಾತ್ರಿಯ ಪ್ರಯುಕ್ತವಾಗಿ ಘಟ್ಟಕ್ಕೆ ಹಾಕುವ ಕಾರ್ಯಕ್ರಮ ನೆರವೇರಿದ್ದು, ಗ್ರಾಮಸ್ಥರು ಭಕ್ತಿಯಿಂದ ಪೂಜೆ ಸಲ್ಲಿಸಿದರು.**

# ನೂತನ ಕಟ್ಟಡ ಉದ್ಘಾಟನೆ

**ಹಾವೇರಿ:** ಗೋವರ್ಧನ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ನಿಯಮಿತದ ನೂತನ ಕಟ್ಟಡ ಉದ್ಘಾಟನೆ ಹಾಗೂ ನೂತನ ಸಂಸ್ಥೆಯ ಶುಭಾರಂಭದ ಸಮಾರಂಭವು ಅ.14ರಂದು ಬೆಳಿಗ್ಗೆ 10ಗಂಟೆಗೆ ತಾಲೂಕಿನ ಹಳೆಹೊನ್ನತ್ತಿ ಗ್ರಾಮದಲ್ಲಿ ನೆರವೇರಲಿದೆ. ಸಮಾರಂಭದ ದಿವ್ಯ ಸಾನಿಧ್ಯವನ್ನು ಲಿಂಗನಾಯಕನಹಳ್ಳಿಯ ಶ್ರೀ ಚೆನ್ನವೀರ ಮಹಾಶಿವಯೋಗಿಗಳು ವಹಿಸುವರು. ಸೊಸೈಟಿಯ ಅಧ್ಯಕ್ಷ ನಿಂಗಪ್ಪ ಗುಡ್ಡಪ್ಪ ಕನವಳ್ಳಿ ಅಧ್ಯಕ್ಷತೆವಹಿಸುವರು.

ಉತ್ತರ ಕರ್ನಾಟಕ ಸುದ್ದಿಗಳು
ಕನ್ನಡ ದಿನ ಪತ್ರಿಕೆ
UTTARA KARNATKA SUDDIGALU
Kannada Daily Morning

# ಯಾವ ಮೋಹನ ಮುರಳಿ ಕಳಿಸಿತು ನನ್ನ ಬಳಿ ನಿಮ್ಮನು...

ಮುಸ್ಸಂಜೆ ಸಮಯ, ಹೊರಗಡೆ ಗಿಡ, ಗಂಟೆಗಳಲ್ಲಿ ಪಕ್ಷಿಗಳ ಚಿಲಿ,ಪಿಲಿ ಕೊರಳ ಸದ್ದು ಜೋರಾಗಿ ಕೇಳಿ ಬರುತ್ತಿತ್ತು. " ಲೋಕ ಬೆಳಗಿದ ಸೂರ್ಯ

ತನ್ನ ನಿತ್ಯದ ಕಾಯಕ ಮುಗಿಸಿ , ಚಂದ್ರನಿಗೆ ರಾತ್ರಿಯ ಕತ್ತಲೆ ಸಮಯದಲ್ಲಿ ಬೆಳಗುವ ಕಾಯಕ ವಹಿಸಿ ತಾಯ ಒಡಲಿನ ಕಡೆಗೆ ಜಾರಿದ್ದ". ಇತ್ತ ನಾನು ಹಾಸಿಗೆಯ ಜಾಡು ತಪ್ಪಿಸಿಕೊಳ್ಳಲು ಪರದಾಡುತ್ತಿದ್ದೆ. ಪತ್ನಿ ಲಕ್ಷ್ಮೀ ಸೋಮವಾರ ಹುಬ್ಬಳ್ಳಿಗೆ ಡಾಕ್ಟರ್ ಹತ್ತಿರ ಹೋಗಬೇಕು.

"ಹಾಲಿನವನಿಗೆ ರೊಕ್ಕಾ ಕೊಡಬೇಕು, ಸಕ್ಕರೆ, ಚಹಾ ಪುಡಿ ಕಾಲಿಯಾಗಿದೆ. ಅಕ್ಕಿ, ಬ್ಯಾಳಿ ಒಳಗೊಂಡಂತೆ ರೇಷನ ಇಲ್ಲಾ, ತರಕಾರಿನು ಇಲ್ಲಾ"ಎಂದು ಇಲ್ಲಗಳ ಪಟ್ಟಿಯನ್ನು ತನ್ನ ಜೋರಾದ ಧ್ವನಿಯಲ್ಲಿ ಅಡುಗೆಮನೆಯಿಂದ ರಾಗಾ ಎಳೆದಳು.

"ಬೆಳಕು ಹರಿಯಲಿ ಏನಾದರೂ ವ್ಯವಸ್ಥೆ ಮಾಡುವೆ" ಎಂದೆ.

ವಾತಾವರಣ ತುಸು ಬಿಸಿ ಇದ್ದ ಕಾರಣಕ್ಕೆ ಮನಸ್ಸಿನಲ್ಲಿ ತಳಮಳ ನಡೆದಿತ್ತು. ಸಾಲು, ಸಾಲು ನಾಲ್ಕು ಶಸ್ತ್ರ ಚಿಕಿತೆ- ್ಸಗೆ ಒಳಗಾದ ದೇಹ ಕ್ರಶವಾಗಿರುವುದನ್ನು ಕಂಡು ಮತ್ತೆ ಚೇತರಿಕೆ ಸಾಧ್ಯವೇ? ಎನ್ನುವ ಚಿಂತೆಯಲ್ಲಿ, ಕಳೆದು ಹೋದ ಮೊದಲಿನ ದಿನಗಳನ್ನು ನೆನೆದು ಮತ್ತಷ್ಟು ಕುಗ್ಗಿ ಹೋಗಿದ್ದೆ.

ಹರಿದ ಬನಿಯನ್, ಹರಕು ಮುರುಕು ಟವಲ್ ಸುತ್ತಿ-ಕೊಂಡಿದ್ದ ನಾನು ತುಂಡಾದ ಬಲಕಾಲನ್ನು ನೋಡಿ-ಕೊಂಡು, ಮೂರು ರಾಡ್ ಹಾಕಿರುವ ಎಡ ಕಾಲಿನ ಪ್ಲಾಸ್ಟರ್ ನೋಡುತ್ತ, ಕಾಲಿನ ಸ್ಥಿತಿಯನ್ನು ಗಮನಿಸಿ "ನನ್ನ ಕಾಲು ಮತ್ತು ನನಗೆ ಎದುರಾಗುವ ಕಾಲದ ಪರೀಕ್ಷೆ ಸರಿ ಹೋಗುವುದು ಯಾವಾಗ? ಎನ್ನುವ ಚಿಂತೆಯಲ್ಲಿ " ಹೇಗಿದ್ದವ, ಹೇಗಾಗಿ ಹೋದೆ"! ಎಂದು ಕೊಂಡು, ಕಾಲು ಎಳೆದುಕೊಂಡು

ಹಾಸಿಗೆ ಬಿಟ್ಟು ಪ್ಲಾಸ್ಟಿಕ್ ಕುರ್ಚಿಯಲ್ಲಿ ಕುಳಿತುಕೊಳ್ಳಲು ಮುಂದಾದೆ, ಅಷ್ಟರಲ್ಲಿ ಬಾಗಿಲಿಗೆ ಹಾಕಿದ್ದ ಸೊಳ್ಳೆ ಪರದೆಯನ್ನು ಯಾರೋ ಸರಿಸಿದಂತಾಯಿತು.

ಮಾಲತೇಶಣ್ಣಾ ಎನ್ನುವ ಕೂಗು ಕೇಳಿಸಿತು. ಧ್ವನಿ ಪುನರಾವರ್ತಿತವಾದಾಗ ಅದು ಚಿರಪರಿಚಿತ ಧ್ವನಿ ಯಾಗಿತ್ತು. ಬರ್ರೀ.... ಬರ್ರೀ.... ಮೋಹನಣ್ಣ ಒಳಗ ಬರ್ರೀ, ಎಂದು ಕುಳಿತಲ್ಲಿಂದಲೇ ಮೋಹನ ಅವರನ್ನು ಸ್ವಾಗತಿಸಿದೆ.

ಮೋಹನ ಅವರ ಜೊತೆಗೆ ಅವರ ಶ್ರೀಮತಿ ಮಂಜುಳಾ ಅಕ್ಕನವರು ಸಹ ಆಗಮಿಸಿದ್ದರು. ಅವರನ್ನು ಕುಳಿತು ಕೊಳ್ಳಲು ಹೇಳಿ, ಅಡುಗೆಮನೆಯಲ್ಲಿದ್ದ ಶ್ರೀಮತಿಯನ್ನು ನನ್ನದೇ ಭಾಷೆಯಲ್ಲಿ ಕರೆದು, "ಮೋಹನಣ್ಣ ಮತ್ತ ಅಕ್ಕಾರು ಬಂದಾರ ಬಾ" ಎಂದು ಕರೆದೆ.

ಸುಮಾರು ಎರಡು ಗಂಟೆಗಳ ಹೊತ್ತು ನನ್ನ ಆರೋಗ್ಯ ವಿಚಾರಿಸಿದ ದಂಪತಿಗಳು ನನಗೆ " "ಧೈರ್ಯ ಕಳೆದುಕೊಳ್ಳಬೇಡಿ, ಆರಾಮಾಗುವಿರಿ. ನಿಮ್ಮೊಂದಿಗೆ ನಾವಿದ್ದೇವೆ, ಯಾವಾಗಲೂ ನಿಮ್ಮನ್ನು ಮಾತನಾಡಿಸಲು



ಬರಬೇಕಿತ್ತು, ಆದರೆ, ಕೆಲಸದ ಒತ್ತಡ ದಿಂದ ಜೊತೆಗೆ ಅನೇಕ ಕಾರಣಗಳಿಂದ ಬರಲು ಸಾಧ್ಯವಾಗಲಿಲ್ಲ" ಎನ್ನುವ ಮಾತುಗಳನ್ನಾಡಿದರು.

ನನ್ನ ಅನಾರೋಗ್ಯದ ಬಗ್ಗೆ, ಮತ್ತೆ ಕಾಲಿನ ಆಪರೇಷನ್ ಬಗ್ಗೆ ವಿವರಿಸಿ, ಆಸ್ಪತ್ರೆಯ ಚಿಕಿತ್ಸೆಯ ಯ ಬಗ್ಗೆ ಅವರೊಂದಿಗೆ ಮಾತನಾಡಿದೆ.

ಈ ಮಧ್ಯ ಅವರ ಮಗ, ಮಗಳು, ಮೊಮ್ಮಗನ, ನನ್ನ ಪುತ್ರಿ, ಅಳಿಯ, ಮಗ, ಮೊಮ್ಮಗನ ಬಗ್ಗೆ ಇಬ್ಬರೂ ಮಾತನಾಡುವ ಮೂಲಕ ನಮ್ಮ ಮಾತು ಕತೆ ಮುಂದುವರೆಯಿತು.

ಈ ನಡುವೆ ಶ್ರೀಮತಿ ಅವಲಕ್ಕಿ, ಬಾಳೆಹಣ್ಣು ಕೊಟ್ಟು ದಂಪತಿಗಳನ್ನು ಉಪಚರಿಸಿದಳು. ದಂಪತಿಗಳು ನನ್ನ ಆರೋಗ್ಯ ವಿಚಾರಿಸಲು ತಂದಿದ್ದ ಹಣ್ಣಿನ ಚೀಲವನ್ನು ಶ್ರೀಮತಿಗೆ ಕೊಟ್ಟು, ಈ ಬಡ ಕುಚೇಲನ ಮನೆಯ ಹಿಡಿ ಅವಲಕ್ಕಿ ಸವಿದರು. ನಾನು ತುಂಬಾ ಆರೋಗ್ಯವಾಗಿದ್ದು ಚಟ ಪಟ ಎಂದು ಓಡಾಡಿಕೊಂಡಿದ್ದವ, ಒಮ್ಮೆಲೆ ಅನಾರೋಗ್ಯಕ್ಕೆ ಒಳಗಾಗಿ ಕಾಲು ಕಳೆದುಕೊಂಡು ಹಾಸಿಗೆ ಹಿಡಿದಿರುವ ಬಗ್ಗೆ ಬಹಳ ಬೇಸರ ವ್ಯಕ್ತಪಡಿಸಿದ ದಂಪತಿಗಳು "ಬಾರದು ಬಪ್ಪದು, ಬಪ್ಪದು ತಪ್ಪದು" ಎನ್ನುವ ಶರಣರ ಮಾತನ್ನು ಉಲ್ಲೇಖಿಸಿ "ಒಳ್ಳೆಯ ದಿನಗಳು ಬರುತ್ತವೆ, ಆತ್ಮವಿಶ್ವಾಸ ಕಳೆದುಕೊಳ್ಳಬೇಡಿ", ಎನ್ನುವ ಮಾತುಗಳ ಮೂಲಕ ನನಗೆ ಆತ್ಮವಿಶ್ವಾಸ ಮೂಡಿಸಿದರು.

ನಾನು ಇತ್ತೀಚೆಗೆ ಎದುರಿಸುತ್ತಿರುವ ಅನಾರೋಗ್ಯದ ಕಷ್ಟದ ಪರಿಸ್ಥಿತಿಯಲ್ಲಿ ಹಣಕಾಸು ಹೊಂದಿಸಲು ಪಟ್ಟ, ಪಡುತ್ತಿರುವ ಸಂಕಷ್ಟದ ಬಗ್ಗೆ ಶ್ರೀಮತಿ ತುಸು ಹೆಚ್ಚೆ ಮಾತನಾಡಿದಳು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ನೌಕರಿ ನಿರ್ವಹಿಸಿ ನಿವೃತ್ತಿ ಹೊಂದಿರುವ ಮೋಹನ ಅವರ ನನ್ನ ಸ್ನೇಹ ಮೂರು ದಶಕದ್ದು. ನಿಜವಾದ ಸ್ನೇಹಕ್ಕೆ ಜಾತಿ, ಮತ, ಬಡತನ ಅಥವಾ ಶ್ರೀಮಂತಿಕೆ ಅಡ್ಡಿಯಾಗಿಲ್ಲ.

"ಜೀವನದಲ್ಲಿ ಬಹಳ ಕಷ್ಟ ಪಟ್ಟು ಜೀವನ ಕಟ್ಟಿಕೊಂಡ ಮೋಹನ ಅವರ ಬದುಕು ಆದರ್ಶವಾದುದು. ಸತಿ, ಪತಿಗಳೊಂದಾದ ಭಕ್ತಿ ಹಿತ ಒಪ್ಪುವುದು ಶಿವಂಗೆ ಎನ್ನುವಂತೆ ದಂಪತಿಗಳ ಇಬ್ಬರೂ ಪರೋಪಕಾರಿ ಗುಣ ಹೊಂದಿದವರು. ಕಷ್ಟದಲ್ಲಿರುವವರಿಗೆ ತಮ್ಮ ಕೈಲಾದ ಮಟ್ಟಿಗೆ ಸಹಾಯ ಮಾಡುತ್ತಾ ಬಂದಿದ್ದಾರೆ".

ಭಗವಂತನಿಗೆ ನಾವು ಕೊಡುವ ಉಡುಗೊರೆ ದೊಡ್ಡದಾಗಿರಬೇಕಾಗಿಲ್ಲ, ಅದನ್ನು ನೀಡುವ ಭಕ್ತಿ ಮತ್ತು ಪ್ರೀತಿ ನಿರ್ಮಲವಾಗಿದ್ದರೆ ಸಾಕು ಎಂಬುದನ್ನು ಅಕ್ಷರಶಃ ಇವರು ಪಾಲಿಸುತ್ತಾ ಬಂದಿರುವರು.

ಶ್ರೀಕೃಷ್ಣ ಮತ್ತು ಕುಚೇಲರ ಸ್ನೇಹವು ಜಗತ್ತಿನಲ್ಲಿಯೇ ಅತ್ಯುನ್ನತ ಮತ್ತು ನಿಸ್ವಾರ್ಥ ಸ್ನೇಹಕ್ಕೆ ಅತ್ಯಂತ ಪ್ರಸಿದ್ಧವಾದ ಉದಾಹರಣೆಯಾಗಿದೆ. ಇವರ ಕಥೆಯು ಶ್ರೀಮಂತಿಕೆ ಮತ್ತು ಬಡತನದ ನಡುವಿನ ಭೇದವನ್ನು ಅಳಿಸಿಹಾಕುವ ಸ್ನೇಹದ ಪಾವಿತ್ರ್ಯತೆಯನ್ನು ಸಾರುತ್ತದೆ.

ಇಂತ ಸ್ನೇಹ ನಮ್ಮಿಬ್ಬರದಾಗಿದೆ.

ಇಬ್ಬರೂ ಕಡು ಕಷ್ಟದ ದಿನಗಳಲ್ಲಿ ಬದುಕು ಕಟ್ಟಿಕೊಂಡವರು. ಮೋಹನ ಅವರು ಹಂತ ಹಂತವಾಗಿ ತಮ್ಮ ವೃತ್ತಿ ಬದುಕಿನಲ್ಲಿ ಎತ್ತರೆತ್ತರಕ್ಕೆ ಬೆಳೆದು ಬಂದವರಾಗಿದ್ದಾರೆ. ಇಂತವರು ನನ್ನ ಮನೆಗೆ ಬಂದು ಎರಡು ಗಂಟೆಗಳ ಕಾಲ ಮಾತನಾಡುತ್ತಾ ತಮ್ಮ ಅನುಭವಗಳನ್ನು ಹಂಚಿಕೊಂಡರು.

"ಗಾಯ ದೇಹಕ್ಕೆ ಆಗಿದೆ ಮನಸ್ಸಿಗಲ್ಲ, ಚಿಂತೆ ಮಾಡಿ ಪ್ರಯೋಜನ ಇಲ್ಲ. ಚಿಂತೆ ಬಿಡಿ, ಚಿಂತನೆ ಮಾಡಿ, ಹಲವಾರು ಜನರಿಗೆ ದಾರಿ ತೋರಿಸಿರುವ ನೀವು ಪುಟದೇಳಬೇಕು" ಎಂದ ಮೋಹನ ಅವರ ಮಾತುಗಳು "ಜೀವನದಲ್ಲಿ ಅನುಭವಸ್ಥ ಹಿರಿಯ ಸ್ನೇಹಿತರ, ಬಂಧುಗಳ ಬೆಂಬಲ ಎಷ್ಟು ಮುಖ್ಯ ಎಂಬುದನ್ನು ನನಗೆ ನೆನಪಿಸಿದವು. ಅವರು ಬಂದು ತುಂಬಾ ಹೊತ್ತಾದ ಕಾರಣ ಮತ್ತೆ ಬರುವುದಾಗಿ ಹೊರಟಾಗ, ನಾನು ಆಯಿತು ಹೋಗಿ ಬನ್ನಿರಿ ಎಂದು ಹೇಳಿದೆ.

ಹೋಗುವ ವೇಳೆ ಮೋಹನ ಅವರು ನನ್ನ ಬಳಿ ಬಂದು ಬೊಗಸೆ ತುಂಬಾ ನೋಟುಗಳನ್ನು ಇಟ್ಟು, ಯಾವಾಗಲೂ ಬರಬೇಕಿತ್ತು ಎಂದರು.

"ಬಹಳ ಬಾರ ಹೊರೆಸುತ್ತಿರುವಿರಿ ಎಂದಾಗ, ಇರಲಿ ಕಷ್ಟದ ಸಮಯದಲ್ಲಿ ನೆರವಾಗುವದು ನಮ್ಮ ಧರ್ಮ" ಎಂದವರೆ ತಮ್ಮ ಶ್ರೀಮತಿ ಅವರೊಂದಿಗೆ ಹೊರ ನಡೆದರು.

ಕಷ್ಟಕಾಲದಲ್ಲಿ ನನ್ನ ಕೈಹಿಡಿದ ಅವರ ಪ್ರೀತಿಗೆ ನನ್ನ ಬಳಿ ಮಾತುಗಳು ಇರಲಿಲ್ಲ."ನನ್ನ ಕಷ್ಟದ ಸಮಯದಲ್ಲಿ ಮಾರ್ಗದರ್ಶಕರಾಗಿ , ಸ್ನೇಹಿತರಾಗಿ ಅವರು ನೀಡಿದ ಆಸರೆ ನನಗೆ ದೊಡ್ಡ ಶಕ್ತಿ ನೀಡಿದೆ.ನಾನು ಧೃತಿಗೆಟ್ಟಿದ್ದಾಗ ಒಬ್ಬ ಹಿರಿಯ ಸ್ನೇಹಿತರಾಗಿ ಅವರು ತೋರಿದ ಕಾಳಜಿ ಮತ್ತು ನಿರೀಕ್ಷೆಯಿಲ್ಲದೆ ಅವರು ಚಾಚಿದ ಸಹಾಯ ಹಸ್ತವನ್ನು ನಾನು ಎಂದಿಗೂ ಮರೆಯುವುದಿಲ್ಲ.

ಗಿಡ, ಮರಗಳು ಯಾವುದೇ ಫಲಾಪೇಕ್ಷೆ ಇಲ್ಲದೆ ಶುದ್ಧ ಆಮ್ಲ ಜನಕ ನೀಡುತ್ತವೆ, ಪರಿಸರ ರಕ್ಷಿಸುತ್ತವೆ. ನೀರು, ನೆರಳು ನೀಡುತ್ತವೆ. ಪಕ್ಷಿಗಳಿಗೆ ಆಸರೆ ನೀಡುತ್ತವೆ, ಹಣ್ಣು ಬಿಡುತ್ತವೆ, ತಾವು ತಿನ್ನುವುದಿಲ್ಲ, ನದಿಗಳು ತಮ್ಮ ನೀರನ್ನು ತಾವೇ ಕುಡಿಯುವುದಿಲ್ಲ, ಹಸುಗಳು ತಮ್ಮ ಹಾಲನ್ನು ತಾವೇ ಉಣ್ಣುವುದಿಲ್ಲ. ಇವೆಲ್ಲವೂ ಪರರಿಗಾಗಿ ಇರುವಂತೆಯೇ ಕೆಲವರು ನಮ್ಮ ಸಮಾಜದಲ್ಲಿ ಇದ್ದಾರೆ. "ಬಲಗೈಯಲ್ಲಿ ನೀಡಿದ ದಾನ ಎಡಗೈಗೆ ತಿಳಿಯಬಾರದು" ಎನ್ನುವ ಉದಾರ ಗುಣದಿಂದ ಅವರು ಉನ್ನತ ಸ್ಥಾನಕ್ಕೇರಿದ್ದಾರೆ. ಇದಕ್ಕೆ ಉದಾಹರಣೆ ಎಂದರೆ ಮೋಹನ ಅವರು.

ಅವರ ಶ್ರೀಮತಿ ಅವರು ಸಹಕಾರ ರಂಗದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

"ನನ್ನ ಈ ಯಾತನಾಮಯದ ಸಂಕಷ್ಟದ ಮತ್ತು ಸಂಕಟ-ದ ಸಮಯದಲ್ಲಿ ಅವರು ನೀಡಿದ , ಚಾಚಿದ ನೆರವಿನ ಸಹಾಯ ಹಸ್ತವನ್ನು ನಾನು ಎಂದಿಗೂ ಮರೆಯುವುದಿಲ್ಲ" ಪಡೆಯುವ ಕೈಗಳಿಗಿಂತ ನೀಡುವ ಕೈಗಳು ಯಾವಾಗಲೂ ಶ್ರೇಷ್ಠ ಅವರಿಗೆ ಮನಸ್ಸಿನಾಳದಿಂದ ಧನ್ಯವಾದಗಳನ್ನು ಹೇಳುತ್ತೇನೆ. ಈ ಮಧ್ಯೆ ಮೋಹನ ದಂಪತಿಗಳು ಭೇಟಿ-ಕೊಟ್ಟು ಹೋದ ನಂತರ ನನ್ನ ವಿದ್ಯಾ ಗುರುಗಳು, ಬಸವೇಶ್ವರ ನಗರ ಮಹಿಳಾ ವೇದಿಕೆಯ ವರು, ಕನ್ನಡ ಪರ ಸಂಘಟನೆಯವರು, ಹಾಗೂ ಕರುನಾಡ ಕನ್ನಡ ಸಾಹಿತ್ಯ ಹಾಗೂ ಸಾಂಸ್ಕೃತಿಕ ಬಳಗದ ಜಿಲ್ಲಾ ಅಧ್ಯಕ್ಷರಾದ ಚಂಪಾ ಹುಣಸಿಕಟ್ಟಿ, ಲೀಲಾವತಿ ಬಿ. ಪಾಟೀಲ, ಲತಾ ಹಳಕೊಪ್ಪ, ಡಾ. ಉಮಾ ಬಳಿಗಾರ, ರೇಣುಕಾ ನರಗುಂದ, ಕಮಲಾ ಬುಕ್ಕಶೆಟ್ಟಿ, ಪುಷ್ಪಾ ಸಾತೇನಹಳ್ಳಿ, ಹೇಮಲತಾ ಮುದ್ದಿ, ನಂದಾ ದಾವಣಗೆರೆ, ಸುಮಂಗಲಾ ಚೌಶೆಟ್ಟಿ, ರೇಣುಕಾ ಮಡಿವಾಳರ, ನೀಲಾ ಗಡಾದ, ನೀಲಮ್ಮ ಗೌಡಮ್ಮನವರ, ಜಯಶ್ರೀ ಅಂಕಲಕೋಟಿ, ಶೋಭಾ ಹಡಗಲಿ, ಮುಖ್ಯ ಶಿಕ್ಷಕರಾದ ಜಿ.ಎಮ್.ಓಂಕಾರಣ್ಣನವರ ಮುಂತಾದವರು ಆಗಮಿಸಿ ಮಾನಸಿಕವಾಗಿ ಧೈರ್ಯ ತುಂಬಿದರು.

ಈ ಮಧ್ಯೆ ಡಾ.ವಿ.ಕ್ರ.ಗೋಕಾಕ ಟ್ರಸ್ಟ್ ಅಧ್ಯಕ್ಷರು, ಹಿರಿಯ ಸಾಹಿತಿಗಳಾದ ಡಾ.ಸತೀಶ ಕುಲಕರ್ಣಿ ಅವರು ಮನೆಗೆ ಆಗಮಿಸಿದ್ದರು. ಒಂದು ಗಂಟೆಯ ತಮ್ಮ ಅಮೂಲ್ಯ ಸಮಯವನ್ನು ನನ್ನ ಜೊತೆಗೆ ಕಳೆದು ಅನೇಕ ಅಮೂಲ್ಯ ವಿಚಾರಗಳನ್ನು ಹಂಚಿಕೊಂಡರು. ಆರೋಗ್ಯದ ಬಗ್ಗೆ ಕಾಳಜಿವಹಿಸುವಂತೆ ಮಾರ್ಗದರ್ಶನ ನೀಡಿ ಈ ಬಡಪಾಯಿಗೆ ಸಹಾಯ ಹಸ್ತ ಚಾಚುವ ಮೂಲಕ ನನ್ನಲ್ಲಿ ಯ ಏಕಾಂಕಿ ಭಾವನೆಯನ್ನು ಹೊಗಲಾಡಿಸಿದ್ದಾರೆ.

ಇವರೊಂದಿಗೆ ಅನೇಕ ಶಿಕ್ಷಕರು, ನಿವೃತ್ತ ಶಿಕ್ಷಕರು, ಸ್ನೇಹಿತರು ಮನೆಗೆ ಆಗಮಿಸಿ ಇವರೆಲ್ಲರೂ ಪ್ರೀತಿ ತೋರಿಸಿದ್ದಾರೆ.

"ಪರೋಪಕಾರಾರ್ಥಂ ಇದಂ ಶರೀರಂ"ಎನ್ನುವ ಮಾತಿನಂತೆ ಗೊತ್ತು ಗುರಿಯಿಲ್ಲದೇ ಕಂಗಾಲಾಗಿರುವ ನನಗೆ ತೋರುತ್ತಿರುವ ಕರಳು ಬಳ್ಳಿಯ ಕಕ್ಕುಲತೆ ಪ್ರೀತಿಗೆ ಪ್ರತಿಯಾಗಿ ನಾನೇನು ಕೊಡಬಲ್ಲೆ?. ಆಗ ನೆನಪಾಗಿದ್ದೆ ಕವಿ ಡಾ.ಜಿ.ಎಸ್. ಶಿವರುದ್ರಪ್ಪ ನವರ " ಯಾವ ಮೋಹನ ಮುರಳಿ ಕರೆಯಿತು ದೂರ ತಿರಕೆ ನಿನ್ನನು" ಎನ್ನುವ ಕವಿತೆಯ ಸಾಲು, ಆ ಸಾಲೆ ಯಾವ "ಮೋಹನ " ಮುರಳಿ ಕಳಿಸಿತು ನನ್ನ ಬಳಿ ನಿಮ್ಮನು ಲೇಖನಕ್ಕೆ ಪ್ರೇರಣೆಯಾಗಿದೆ.

**ಮಾಲತೇಶ ಅಂಗೂರ, ಹಾವೇರಿ.**

# ಪಿಎಂಡಿಡಿಕೆವೈ ಅತ್ಯುತ್ತಮ ಸಾಧನೆ: ಜಿಲ್ಲಾಧಿಕಾರಿಗಳಿಗೆ ಸನ್ಮಾನ



**ಹಾವೇರಿ ಪ್ರಧಾನ ಮಂತ್ರಿ ಧನ್- ಧಾನ್ಯ ಕೃಷಿ ಯೋಜನೆ (ಕಒಆಆಏಜ) ಯಡಿ ಜಿಲ್ಲೆಯಲ್ಲಿ ಉತ್ತಮ ಸಾಧೆನ ಮಾಡಿದ ಹಿನ್ನಲೆಯಲ್ಲಿ ನವದೆಹಲಿಯಲ್ಲಿ ಸೋಮವಾರ ಜರುಗಿದ ರಾಷ್ಟ್ರಮಟ್ಟದ ಕಾರ್ಯಕ್ರಮದಲ್ಲಿ ಹಾವೇರಿ ಜಿಲ್ಲಾಧಿಕಾರಿ ಡಾ.ವಿಜಯಮಾಹಾಂತೇಶ ದಾನಮ್ಮನವರ ಅವರಿಗೆ ಪ್ರಮಾಣಪತ್ರ ವಿತರಿಸಿ ಸನ್ಮಾನಿಸಲಾಯಿತು. ಜಿಲ್ಲೆಯಲ್ಲಿ ಕೃಷಿ ಕ್ಷೇತ್ರದ ಅಭಿವೃದ್ಧಿ, ರೈತರ ಕಲ್ಯಾಣ ಹಾಗೂ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಉತ್ತಮ ಸಾಧನೆ ಪರಿಗಣಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದ್ದು ಶ್ಲಾಘನೀಯವಾಗಿದೆ. ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವರು, ಇತರರು ಪ್ರಮಾಣಪತ್ರ ವಿತರಿಸಿದರು. ಜಂಟಿ ಕೃಷಿ ನಿರ್ದೇಶಕ ಮಲ್ಲಿಕಾರ್ಜುನ ಸಹ ಭಾಗವಹಿಸಿದ್ದರು.**

# ಸ್ಕೈಕ್ಲಿಂಗ್‌ನಲ್ಲಿ ಚಿನ್ನದ ಪದಕ ತಂದ ಪ್ರಿಯಾಂಕ

**ಗದಗ:** 23ನೇ ರಾಷ್ಟ್ರಮಟ್ಟದ ಎಂಟಿಬಿ ಸೈಕ್ಲಿಂಗ್ ಚಾಂಪಿಯನ ಶಿಪ್ -2026 ಮಹೇಂದ್ರಗಿರಿ, ಓಡಿಶಾದಲ್ಲಿ 01-10-202600 ದಿನಾಂಕ 04-102026 ವರೆಗೆ ನಡೆದಿದ್ದು, ಯುವ ಸಬಲೀಕರಣ ಮತ್ತು



ಕ್ರೀಡಾ ಇಲಾಖೆಯ ಗದಗ ಕ್ರೀಡಾವಸತಿ ನಿಲಯದ ಸೈಕ್ಲಿಂಗ್ ಕ್ರೀಡಾಪಟು ಪ್ರಿಯಾಂಕಲಮಾಣಿ 16 ವರ್ಷದ ಒಳಗಿನ ಬಾಲಕಿಯರ ಎಕ್ಸಿಒ ಇವೆಂಟ್‌ನಲ್ಲಿ 1 ಬೆಳ್ಳಿಯ ಪದಕ ಮತ್ತು ಜೂನಿಯರ್ ವಿಬ್ಭಾಗದ ಎಕ್ಸಿಆರ್ ಇವೆಂಟ್‌ನಲ್ಲಿ 1 ಬಂಗಾರದ ಪದಕ ಮೂಡಿಗೇರಿಸಿಕೊಂಡು ಗದಗ ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಸಾಧನೆ ಮಾಡಿದ ಕ್ರೀಡಾಪಟುವಿಗೆ ಹಾಗೂ ತರಬೇತುದಾರ ವಿದ್ಯಾ ಕುಲಕರ್ಣಿ ಅವರಿಗೆ ಸಚಿವ ಬಸವರಾಜ ರಾಯರಡ್ಡಿ, ಗದಗ ಶಾಸಕ ಡಾ. ಎಚ್. ಕೆ. ಪಾಟೀಲ, ಜಿಲ್ಲಾಧಿಕಾರಿ ಸಿ.ಎಸ್ ಶ್ರೀಧರ ಹಾಗೂ ಗದಗ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮುಕುಲ್ ಜೈನ ಹಾಗೂ ಗದಗ ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಡಾ. ಶರಣು ಐ. ಗೋಗೇರಿ ಹಾಗೂ ಕಛೇರಿ ಸಿಬ್ಬಂದಿಗಳು ಅಭಿನಂದನೆ ಸಲ್ಲಿಸಿರುತ್ತಾರೆ.

# ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ

**ಹಾವೇರಿ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ನ್ಯಾಯವಾದಿಗಳ ಸಂಘ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ವಿಭಾಗ, ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಗಾಂಧಿಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರ ಸಹಯೋಗದಲ್ಲಿ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮ ಅ.14 ರಂದು ಬೆಳಿಗ್ಗೆ 10-30 ಗಂಟೆಗೆ ಗಾಂಧಿಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ ಜರುಗಲಿದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶ್ರೀಮತಿ ಶ್ರೀಶೈಲಜಾ ಎಚ್.ವಿ. ಉದ್ಘಾಟನೆ ನೆರವೇರಿಸಲಿದ್ದು, ಗಾಂಧಿಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರದ ಡಾ.ನದಾಫ್ ವೈ.ಎಫ್ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ನಾಗರಾಜ, ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಡೀನ್ ಮತ್ತು ವೈದ್ಯಕೀಯ ನಿರ್ದೇಶಕ ಡಾ.ಪ್ರದೀಪಕುಮಾರ ಎಂ.ವಿ., ಜಿಲ್ಲಾ ಆಸ್ಪತ್ರೆ ಶಸ್ತ್ರ ಚಿಕಿತ್ಸಕ ಡಾ.ಪಿ.ಆರ್. ಹಾವನೂರ, ಜಿಲ್ಲಾ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಎಚ್.ಸಿ.ಸಿದ್ದನಗೌಡ್ರ, ಕಾರ್ಯದರ್ಶಿ ಪಿ.ಎಸ್.ಹೆಬ್ಬಾಳ, ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಅನುಷ್ಠಾನಾಧಿಖಾರಿ ಡಾ.ಚನ್ನಬಸಯ್ಯ ವಿರಕ್ತಮಠ, ತಾಲೂಕಾ ಆರೋಗ್ಯಾಧಿಕಾರಿ ಡಾ.ಪ್ರಭಾಕರ ಕುಂದೂರ, ಅಪರಾಧ ಶಾಸ್ತ್ರ ಮತ್ತು ನ್ಯಾಯ ವಿಜ್ಞಾನ ವಿಭಾಗದ ಸಹ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥ ಡಾ. ಚಂದ್ರಪ್ರಭಾ ಪಟಗಾರ, ಐಕ್ಯೂಎಸಿ ಸಂಸಯೋಜಕ ಡಾ.ಜೆ.ಸಿ.ಇಂಡಿಮಠ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಉಮೇಶ ಕರಮುಡಿ ಅವರು ಭಾಗವಹಿಸಲಿದ್ದಾರೆ.

ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮನೋವೈದ್ಯೆ ಡಾ.ಶೃತಿ ಎ ಅವರು ಉಪನ್ಯಾಸಕರಾಗಿ ಭಾಗವಹಿಸಲಿದ್ದಾರೆ.

# ಚುನಾವಣಾ ಆಯೋಗದ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ: ಡಿಸಿ ಡಾ. ಸುರೇಶ ಇಟ್ನಾಳ

**ಕೊಪ್ಪಳ :** ಕರ್ನಾಟಕ ವಿಧಾನ ಪರಿಷತ್ತಿನ ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆಯ ನಿಮಿತ್ತ ಚುನಾವಣಾ ಕರ್ತವ್ಯದಲ್ಲಿ ನಿಯೋಜನೆಗೊಂಡಿರುವ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿ ಚುನಾವಣಾ ಆಯೋಗದ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಕರ್ನಾಟಕ ವಿಧಾನ ಪರಿಷತ್ತಿನ ಈಶಾನ್ಯ ಶಿಕ್ಷಕರ ಕ್ಷೇತ್ರದ ಸಹಾಯಕ ಚುನಾವಣಾಧಿಕಾರಿಗಳು ಆಗಿರುವ ಕೊಪ್ಪಳ ಜಿಲ್ಲಾಧಿಕಾರಿಗಳಾದ ಡಾ. ಸುರೇಶ ಬಿ. ಇಟ್ನಾಳ ಅವರು ಸೂಚನೆ ನೀಡಿದರು.

ಕರ್ನಾಟಕ ವಿಧಾನ ಪರಿಷತ್ತಿನ ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆಯನ್ನು ಪಾರದರ್ಶಕ, ನಿಷ್ಪಕ್ಷಪಾತ ಹಾಗೂ ವ್ಯವಸ್ಥಿತವಾಗಿ ನಡೆಸುವ ಉದ್ದೇಶದಿಂದ ಕೊಪ್ಪಳ ಮತ್ತು ವಿಜಯನಗರ ಜಿಲ್ಲೆಯ ಮತಗಟ್ಟೆ ಸಿಬ್ಬಂದಿಗಳಿಗೆ ಹಾಗೂ ಮೈಕ್ರೋ ಆಬ್ಸರ್ವರ್ ಗಳಿಗೆ ಕೊಪ್ಪಳ ಜಿಲ್ಲಾ ಪಂಚಾಯತ್ ಜೆ.ಹೆಚ್. ಪಟೇಲ್ ಸಭಾಂಗಣದಲ್ಲಿ ಸೋಮವಾರ (ಅ. 12ರಂದು) ಹಮ್ಮಿಕೊಳ್ಳಲಾಗಿದ್ದ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಮತದಾನ ಪ್ರಕ್ರಿಯೆ ಹಾಗೂ ಮತಪತ್ರಗಳ ನಿರ್ವಹಣೆ ಸಂಬಂಧಿಸಿದಂತೆ ಚುನಾವಣಾ ಆಯೋಗ ನೀಡಿರುವ ಮಾರ್ಗಸೂಚಿಗಳನ್ನು ಅಧಿಕಾರಿಗಳು ನಿಖರವಾಗಿ ಅರಿತುಕೊಳ್ಳಬೇಕು. ಮತದಾನದ ದಿನದಂದು ಯಾವುದೇ ರೀತಿಯ ಲೋಪದೋಷಗಳು ಅಥವಾ ಗೊಂದಲಗಳು ಉಂಟಾಗದಂತೆ ಮತಗಟ್ಟೆ ಅಧಿಕಾರಿಗಳು ಪೂರ್ವಸಿದ್ಧತೆ ಮಾಡಿಕೊಳ್ಳಬೇಕು. ಮತಗಟ್ಟೆ ಸಿಬ್ಬಂದಿ ಪರಸ್ಪರ ಸಮನ್ವಯ ಸಾಧಿಸಿ ಶಾಂತಿಯುತ ಮತದಾನಕ್ಕೆ ಸಹಕರಿಸಬೇಕು ಎಂದು ಹೇಳಿದರು.

ಕಾರ್ಯಾಗಾರದಲ್ಲಿ ರಾಜ್ಯಮಟ್ಟದ ಮಾಸ್ಟರ್ ಟ್ರೈನರ್ ಎನ್.ವಿ ಶಿಗ್ಗಾವಕರ್ ಅವರು ಮತಗಟ್ಟೆ ಅಧಿಕಾರಿಗಳ ಕರ್ತವ್ಯಗಳು, ಮತದಾನದ ದಿನದ ಕಾರ್ಯವಿಧಾನಗಳು ಮತ್ತು ಅಗತ್ಯ ನಮೂನೆಗಳ ಭರ್ತಿ ಕುರಿತು ವಿಸ್ತ್ರತವಾಗಿ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಕೊಪ್ಪಳ ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ, ವಿಜಯನಗರ ಅಪರ ಜಿಲ್ಲಾಧಿಕಾರಿಗಳಾದ ಪಿ.ಎನ್.ಲೋಕೇಶ ಸೇರಿದಂತೆ ಚುನಾವಣಾ ಕರ್ತವ್ಯಕ್ಕೆ ನಿಯೋಜಿತರಾದ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.



UTTARA KARNATAKA SUDDIGALU KANNADA DAILY MORNING OWNER, PUBLISHER, BY: AVINASH S SALIMANI, PUBLISHED FROM: 220 SHIVANAND NAGAR, NAVANAGAR, HUBLI_DHARWAD KARNATAKA- 580025, PRINTED AT: SHIVANI PRINTERS, NEW COURT OPPOSITE PLOT NO 28RS NO 312/ 3B GARAG COMPLEX GADAG, AT: GADAG- 582101, AT: KARNATAKA, EDITOR BY : AVINASH S SALIMANI